
ಕಲ್ಯಾಣ ಕಿರಣ





ಆಗಸ್ಟ್-2011

ಬೆಲೆ-10/-


HE CAME

HE SAW

HE CONQUERDE



ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಸ್ವಾಮೀಜಿ



www.lingayatreligion.com ವೆಬ್‌ಸೈಟ್ ಉದ್ಘಾಟನೆ



ಬಸವ ಪಂಚಮಿಯ ವೇದಿಕೆಯ ಚಿತ್ರ



ಶರಣ ಗೌರೀಶ್ ಅಕ್ಕಿಯವರಿಗೆ ಸತ್ಕಾರ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-08	ಆಗಸ್ಟ್- 2011	ವಾರ್ಷಿಕ ಚಂದಾ 100 ರೂ.

-: ಹೆಂಗ ಮರೆಯಲಿ ಗುರು ಲಿಂಗಾನಂದರನ ?:-

ಹೆಂಗ ಮರೆಯಲೆವ್ವಾ ಇವರನ
ಜಗದ್ಗುರು ಲಿಂಗಾನಂದರನ
ಹೆಂಗ ಮರೆಯಲೆವ್ವಾ ನಾನು
ಲಿಂಗ ದೀಕ್ಷೆಯ ನೀಡಿದವನ ॥ ॥ ಪ ॥

ಬಯಲೊಳು ಎನ್ನನು ಕರೆದು
ಭವದ ಭಯವ ಬಿಡಿಸಿದವನ
ಬಯಲಿನ ಬಗೆಯನು ತಿಳಿಸಿ
ಭಗವತ್ ಚಿಂತನ ಹಿಡಿಸಿದವನ ॥ ॥ 1 ॥

ಮಣಗವಳ್ಳಿ ಪುರದಲ್ಲಿ ಉದಿಸಿ
ಮೂಡಿ ಬಂದ ದಿನಮಣಿ ಇವನ ।
ಮೂಢಗತ್ತಲೆಯನು ಕಳೆದು
ಮುಕ್ತಿಯ ಮಾರ್ಗ ತೋರಿದವನ ॥ ॥ 2 ॥

ವಿಷಮ ಸಂಸಾರದಲ್ಲಿ ಬಿದ್ದು
ಕೆಸರಿನೊಳು ಮುಳುಗಿದ ಜನರ ।
ಹಸನಾಗಿ ಪರಿವರ್ತನೆ ಗೊಳಿಸಿ
ಬಸವ ತತ್ವ ಬೋಧಿಸಿದವನ ॥ ॥ 3 ॥

ಆರು ಮೂರು ಗುಣಗಳ ಬಿಡಿಸಿ
ಅಂತರಂಗದ ಕದವನು ತೆರೆಸಿ ।
ಲಿಂಗಪೂಜೆಯ ಗುಂಗನು ಹಿಡಿಸಿದ
ಮಂಗಲಾತ್ಮ ಮಹಾ ಮಹಿಮನ ॥ ॥ 4 ॥

ಲಿಂಗ ಜಂಗಮದ ನಿಲುವನು ತಿಳಿಸಿ
ಬಸವ ತತ್ವ ಪಸರಿಸಿದವನ ।
ಬಸವ ಧರ್ಮ ಪೀಠವ ಏರಿದ
ಪ್ರಥಮ ಜಗದ್ಗುರು ಲಿಂಗಾನಂದರನ ॥ ॥ 5 ॥

- ಶರಣ. ಮಹಾದೇವ ಗುಡೇರ್
ರಾಷ್ಟ್ರೀಯ ಬಸವ ದಳ, ಗೋಕಾಕ್

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಸೆಪ್ಟೆಂಬರ್ ತಿಂಗಳಿನಲ್ಲಿ ಬರುವ ಹಬ್ಬಗಳು

1. 01-9-11 - ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ 80ನೆಯ ಹುಟ್ಟುಹಬ್ಬ
2. 01-9-11 - ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 53ನೆಯ ವರ್ಧಂತಿ
3. 01-9-11 - ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಮತ್ತು ಶ್ರಾವಣ ಮಾಸದ ಬಸವ ಜ್ಯೋತಿಯ ಸಮಾರೋಪ ಸಮಾರಂಭ

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 7760627640, 8892912123 ಎಸ್.ಎಂ.ಎಸ್. ಮುಖಾಂತರ ಕಳುಹಿಸಿರಿ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹತ್ತನೆಯ ಕಲ್ಯಾಣ ಪರ್ವ

2011ರ ಅಕ್ಟೋಬರ್ 09, 10 ಮತ್ತು 11 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 24ನೆಯ ಶರಣ ಮೇಳವು ಇದೇ 2011ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

> "ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
> ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
> ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ " ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 10ನೆಯ ಕಲ್ಯಾಣ ಪರ್ವವನ್ನು 2011 ರ ಅಕ್ಟೋಬರ್ 09, 10 ಮತ್ತು 11 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ

****

ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 08ರ ರಾತ್ರಿಯಿಂದ ಅಕ್ಟೋಬರ್ 12 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ 5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ : 150 ರೂ.

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಠೇವಣಿ ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ, ಬಸವ ಮಹಾಮನೆ, ಬಸವ ಕಲ್ಯಾಣ
-585327, ಜಿಲ್ಲೆ-ಬೀದರ್
☎:08481 -251921/252856, 9448732456 , 9480497346

****

ಸಂಪಾದಕೀಯ: - ಮಾತಾಜಿ

1. ವಿಭೂತಿ ಹಚ್ಚಿ ಏರಿದರು...... ಕುಂಕುಮ ಹಚ್ಚಿ ಇಳಿದರು.......

ಲಿಂಗಾಯತ ಸಮಾಜಕ್ಕೆ ದೊರಕಿಸಬೇಕಾದ ಮುತ್ಸದ್ದಿತನದ ಕೀರ್ತಿಯನ್ನು ನಿಂದನಾತ್ಮಕವಾಗಿ ರಾಜೀನಾಮೆ ಕೊಡುವುದರ ಮೂಲಕ ಶ್ರೀ ಬಿ.ಎಸ್.ಯಡೆಯೂರಪ್ಪನವರು ಕಳೆದರು. ತಮಗೆ, ತಮ್ಮ ಪಕ್ಷಕ್ಕೆ ದೊರಕಿದ್ದ ಸುವರ್ಣಾವಕಾಶವನ್ನು ಕಳೆದುಕೊಂಡರು, ಕಳೆದರು.

ಅದೇ ಆಗ 20: 20 ಕರಾರಿನಲ್ಲಿ ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು 20 ತಿಂಗಳು ಮುಗಿಸಿದ್ದರು. ಇನ್ನು 20 ತಿಂಗಳು ಅಧಿಕಾರದ ಅವಕಾಶವನ್ನು ಬಿಜೆಪಿಗೆ ಆದರ ನೇತಾರರಾದ ಬಿ.ಎಸ್. ಯಡೆಯೂರಪ್ಪನವರಿಗೆ ಬಿಟ್ಟು ಕೊಡಬೇಕಾಗಿತ್ತು. ಅವರ ಪಿತಾಶ್ರೀಯವರ ದುರ್ಬೋಧನೆಯಿಂದ ಕೊಟ್ಟ ಮಾತಿಗೆ ತಪ್ಪಿದರು. ಆಗ ಚುನಾವಣೆ ನಡೆಯಿತು. ಹೆಚ್.ಡಿ.ಕೆಯವರ ವಿಶ್ವಾಸ ದ್ರೋಹ ಬಿಜೆಪಿಗೆ ಅನುಕಂಪದ ಅಲೆಗಳನ್ನು ಎಳಿಸಿತು. ಬಿಜೆಪಿ ಗೆದ್ದು ಬಂದಿತು. ದುರ್ದೈವದಿಂದ ಬಹುಮತದ ಕೊರತೆ ಕಾಡತೊಡಗಿತು. ಬಸವ ಪಂಚಮಿ ಕಾರ್ಯಕ್ರಮಕ್ಕೆ ಬಿ.ಎಸ್.ವೈ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆಗ ನಾನು, "ಮಾತಿನ ಪ್ರಕಾರ ಕುಮಾರಸ್ವಾಮಿಯವರು ಅಧಿಕಾರವನ್ನು ಹಸ್ತಾಂತರಿಸಬೇಕು. ವಿಶ್ವಾಸ ದ್ರೋಹ ಒಳಿತಲ್ಲ." ಎಂದು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆದ ಬಸವ ಪಂಚಮಿ ಕಾರ್ಯಕ್ರಮದಲ್ಲಿ ಸ್ಪಷ್ಟವಾಗಿ ನುಡಿದಿದ್ದೆ. ನಂತರ ಕಲ್ಯಾಣ ಕಿರಣದಲ್ಲಿ ಸಂಪಾದಕೀಯ ಲೇಖನವನ್ನೂ ಬರೆದೆ. ವಿರೋಧ ಪಕ್ಷದಲ್ಲಿದ್ದು (ವೀರಾವೇಶದ ಮಾತುಗಳನ್ನಾಡಿ) ಅನುಭವ ಗಳಿಸಿರುವ ಯಡೆಯೂರಪ್ಪನವರಿಗೆ ಅಧಿಕಾರದ ಒಂದು ಅವಕಾಶವನ್ನು ಕನ್ನಡಿಗರು ಕೊಡುವುದು ಒಳ್ಳೆಯದು." ಎಂದು ಶರಣ ಮೇಳದ ಬೃಹತ್ ಸಭೆಯಲ್ಲಿ ಹೇಳಿದೆ. 2008ರ ಶರಣ ಮೇಳದಲ್ಲಿ ಮುಖ್ಯ ಅತಿಥಿಗಳಾಗಿ ಬಿ.ಎಸ್.ವೈರವರು ಶ್ರೀ ಜನಾರ್ಧನ ರೆಡ್ಡಿಯವರ ಹೆಲಿಕಾಪ್ಟರಲ್ಲಿ ಬಂದಿದ್ದರು. ಸಂತೋಷ ಹಾಗೂ ಕೃತಜ್ಞತೆಯಿಂದ ಈ ಹೇಳಿಕೆಯನ್ನು ಸ್ವಾಗತಿಸಿದರು. (ಈ ಎಲ್ಲ ಅವಾಂತರ ನೋಡಿದ ಮೇಲೆ, ಎಲ್ಲರ ನಿರೀಕ್ಷೆಗಳೂ ಹುಸಿಯಾದುದರಿಂದ ಅಂಥ ಹೇಳಿಕೆ ನೀಡಿದ್ದಕ್ಕೆ ನನಗೆ ನಾಚಿಕೆ ಎನಿಸುತ್ತಿದೆ, ಪಶ್ಚಾತ್ತಾಪವಾಗುತ್ತಿದೆ.)

ಅಧಿಕಾರಕ್ಕೇನೋ ಬಂದರು. ಆದರೆ ಅದರ ಪಿತ್ತ ತಲೆಗೇರಿತು. ಅಧಿಕಾರ ಸ್ವೀಕಾರದ ದಿನವೇ ನಮಗೆ, ನಮ್ಮಂತೆ ಅನೇಕರಿಗೆ ನೋವು ಉಂಟಾಯಿತು. ಪ್ರತಿಜ್ಞಾಸ್ವೀಕಾರಕ್ಕೆ ಮೊದಲು ಮಹಾತ್ಮಾ ಗಾಂಧೀಜಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು, ಡಾ।। ಅಂಬೇಡ್ಕರರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಶಾಸಕರ ಭವನಕ್ಕೆ ಹೊಂದಿಕೊಂಡಿರುವ ಗುರು ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಿಲ್ಲ; ತನ್ನನ್ನು ಲಿಂಗಾಯತ ಎಂದು ಜನ ಭಾವಿಸಿದರೆ ಎಂಬ ಆತಂಕ ಕಾಡಿರಬೇಕು. ಇದಕ್ಕೇ ಸಮಯ ಸಾಧಕತನ ಎನ್ನುವುದು. ಚುನಾವಣೆಗೆ ನಿಲ್ಲುವಾಗ, ಓಟು ಕೇಳುವಾಗ 'ಲಿಂಗಾಯತ' ಎಂಬ ಬಿರುದು ಬೇಕು! ಇಷ್ಟಕ್ಕೂ ಮಿಕ್ಕಿ ಗುರು ಬಸವಣ್ಣನವರು ಲಿಂಗಾಯತರಿಗೆ ಸೀಮಿತರೆ? ಹೆತ್ತ ತಾಯಿಗೆ ನಮಸ್ಕರಿಸದೆ ಸುತ್ತಲೂ ಇದ್ದ ಮಹಿಳೆಯರಿಗೆ ನಮಸ್ಕರಿಸಿದರೆ ಹೇಗೋ ಹಾಗೆ ಸಿದ್ಧಗಂಗಾ ಶ್ರೀ, ಆದಿಚುಂಚನಗಿರಿ ಶ್ರೀ, ರವಿಶಂಕರ್ ಗುರೂಜಿ ಎಲ್ಲರ ದರ್ಶನ, ಆಶೀರ್ವಾದ ಪಡೆದು ಧರ್ಮಗುರುವನ್ನು ಮರೆತುದು. ಶ್ರೀ ಸಿದ್ಧರಾಮೇಶ್ವರರು ಹೇಳುತ್ತಾರೆ, ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯ, ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯ. ಹೀಗೆ ಗುರು ಬಸವಣ್ಣನವರನ್ನು ಮರೆತ ಕಾರಣ ಅಧಿಕಾರಕ್ಕೆ ಬಂದ ದಿನದಿಂದಲೂ ಸಂಕಷ್ಟಗಳು, ತಾಪತ್ರಯಗಳು !

"ನಿಜ, ಬಸವಣ್ಣನವರ ಹೆಸರಿನಲ್ಲಿ ಎಷ್ಟೊಂದು ಯೋಜನೆ ರೂಪಿಸಿದರು. ಬಸವ

ಕಲ್ಯಾಣ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದರು. ಮಠ ಮಾನ್ಯಗಳಿಗೆ ಉದಾರವಾಗಿ ಧನ ಸಹಾಯ ಮಾಡಿದರು. ಇದೆಲ್ಲ ಪುಣ್ಯಾರ್ಹವಲ್ಲವೆ?" ಎಂದು ಯಾರಾದರೂ ಕೇಳಬಹುದು.

ಇಚ್ಛೆಯನ್ನು ಅರಿದಿತ್ತನುಚ್ಚೊಂದು ಮಾಣಿಕವು
ಇಚ್ಛೆ ತೀರ್ದ ಬಳಿಕ ಈಯುವ ಮಾಣಿಕವು
ನುಚ್ಚಿಗಿಂ ಕಷ್ಟ ಸರ್ವಜ್ಞ ||

ಯಾವ ಸಮಯದಲ್ಲಿ - ಇಡೀ ದೇಶ ಅವರ ಚಟುವಟಿಕೆ ನೋಡುವ ಸಮಯದಲ್ಲಿ, ಗುರು ಬಸವಣ್ಣನವರ ಪುತ್ಥಳಿಗೆ ಗೌರವ ಸಲ್ಲಿಸದಿರುವುದು ಅಕ್ಷಮ್ಯ ಅಪರಾಧ ಗುರು ಬಸವಣ್ಣನವರು ನೊಂದುಕೊಂಡರೋ ಇಲ್ಲವೋ ನಮಗೆ, ನಮ್ಮಂತೆ ಅನೇಕರಿಗೆ ನೋವಾದುದು ಸತ್ಯ. ಹೀಗೆ ಅವರು ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದಾಗಲೇ ಹಾಲಿನ ಕೊಡದಲ್ಲಿ ಹರಳುಪ್ಪು ಬಿದ್ದಂತಾಯಿತು.

ಆಡಳಿತ ವೈಖರಿ: ವಿರೋಧ ಪಕ್ಷದ ನಾಯಕರಾಗಿ ಆಡುತ್ತಿದ್ದ ಮಾತುಗಳನ್ನು ಕೇಳಿ ಶ್ರೀ ಬಿ.ಎಸ್.ವೈ ಒಬ್ಬ ಮುತ್ಸದ್ದಿ ಎಂದುಕೊಂಡಿದ್ದೆವು. ಅಧಿಕಾರಕ್ಕೆ ಬಂದ ತಕ್ಷಣ ನಿಜ ರೂಪ ಬಯಲಾಗ ತೊಡಗಿತು. ವಿಧಾನ ಸೌಧದಲ್ಲಿ ಹೋಮ -ಹವನ, ಕುರ್ಚಿಗೆ ಉಗುಳಿ ಕುಳಿತದ್ದು, ಗುಡಿ ಗುಡಿ ಸುತ್ತಿದ್ದು ಎಲ್ಲವೂ ಲಿಂಗಾಯತ ತತ್ವ ಸಿದ್ಧಾಂತಕ್ಕೆ ವಿರುದ್ಧವೆ! ಬರಬರುತ್ತ ಕೋಳಿ ಬಲಿ, ನಿಂಬೆ ಹಣ್ಣು ಮಂತ್ರಿಸಿದ್ದು ಮುಂತಾದ ವಾಮಾಚಾರ ಸಹ ನಡೆದು ಬಿಟ್ಟಿತು. ಇದರಿಂದ ತಾವಷ್ಟೇ ಮೂಢರು ಎನ್ನಿಸಿಕೊಳ್ಳದೆ ಅವರು ಅನುಸರಿಸುವ ಧರ್ಮದ, ಸಮಾಜದ ಮರ್ಯಾದೆಯನ್ನು ಹರಾಜಿಗಿಟ್ಟಿತು. ಸನ್ಮಾನ್ಯರುಗಳಾದ ಎಸ್.ನಿಜಲಿಂಗಪ್ಪ, ವೀರೇಂದ್ರ ಪಾಟೀಲ್ ಮುಂತಾದವರ ಮುಂದೆ ಯಡೆಯೂರಪ್ಪನವರ ವ್ಯಕ್ತಿತ್ವ ಕುಬ್ಜ ಎನಿಸಿತು. ಅವರ ಆಡಳಿತ ವೈಖರಿ ಪ್ರೌಢತೆ, ಗಾಂಭೀರ್ಯದಿಂದ ಕೂಡಿದ್ದರೆ ಇವರ ಆಡಳಿತ ಬಹಳ ಸಡಿಲ ಮತ್ತು ಬೇಕಾಬಿಟ್ಟಿ ಎನಿಸಿತು. ರೋಮ್ ಹೊತ್ತಿ ಉರಿಯುತ್ತಿರುವಾಗ ಅಲ್ಲಿನ ರಾಜಕುಮಾರ ನೀರೋ ಪಿಟೀಲ ಬಾರಿಸುತ್ತಿದ್ದನಂತೆ ಎಂಬಂತೆ ಕರ್ನಾಟಕದಲ್ಲಿ ಭಿನ್ನಮತೀಯರು ಹಾರಾಡುತ್ತಿರುವಾಗ ಯಡೆಯೂರಪ್ಪನವರು ಕೇರಳದ ದೇವಾಲಯಗಳನ್ನು ಸುತ್ತುತ್ತಿದ್ದರು.

ಉತ್ಸವಗಳ ವೀರ : ಒಂದೇ ಎರಡೇ ಹಂಪೆಯ ವೈಭವಯುತ ಉತ್ಸವದ ಜೊತೆಗೆ ಎಲ್ಲ ಕಡೆ ಉತ್ಸವಗಳ ಮಹಾಪೂರ. ಮೂಲಭೂತ ಸೌಲಭ್ಯವಿಲ್ಲದೆ ಹಳ್ಳಿಗಳಂತೆ ಇರುವ (ಉದಾ: ಐಹೊಳೆ, ಪಟ್ಟದ ಕಲ್ಲು) ಉತ್ಸವಗಳಿಗೆ ಮುಂಬೈಯಿಂದ ಹೇಮಮಾಲಿನಿಯನ್ನು ಕರೆಸುವುದು. ಈ ಉತ್ಸವಗಳಿಂದ ಯಾರಿಗೆ ಪ್ರಯೋಜನ? ರಾಜಕಾರಣಿಗಳಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಒಂದಕ್ಕೆ ಹತ್ತರಷ್ಟು ಖರ್ಚು ತೋರಿಸಿ ತಮ್ಮ ಬೊಕ್ಕಸ ತುಂಬಿಕೊಳ್ಳುವ ಉತ್ಸಾಹ. ಈ ಉತ್ಸವಗಳಿಗೆ ಖರ್ಚು ಮಾಡುವ ಹಣವನ್ನು ಆ ಸ್ಥಳಗಳನ್ನು ಸಂದರ್ಶಿಸುವವರಿಗೆ ವಸತಿ, ಶೌಚಾಲಯ ಮುಂತಾಗಿ ಅಭಿವೃದ್ಧಿಪಡಿಸಲು ಖರ್ಚು ಮಾಡಿದರೆ ಪ್ರವಾಸಿಕರಿಗೆ ಎಷ್ಟು ಅನುಕೂಲ!

ಯಡೆಯೂರಪ್ಪನವರು ವಿಧಾನ ಸೌಧದಲ್ಲಿ ಕುರ್ಚಿ ಮೇಲೆ ಕುಳಿತು ಕೆಲಸ ಮಾಡಿದ್ದಕ್ಕಿಂತಲೂ ಗುಡಿ, ಮಠಗಳನ್ನು ಸುತ್ತಿದ್ದೇ ಹೆಚ್ಚು. ಕೊರಳಲ್ಲಿದ್ದ ಇಷ್ಟಲಿಂಗವು ಮಾಯವಾಯಿತು. ಹಣೆಯ ಮೇಲೆ ಅಧಿಕಾರಕ್ಕೆ ಮೊದಲು ಇರುತ್ತಿದ್ದ ವಿಭೂತಿ ಮಾಯವಾಗಿ ಸದಾಕಾಲ ಕುಂಕುಮವೇ ರಾರಾಜಿಸತೊಡಗಿತು. ನಾವು ಊಹೆ ಮಾಡಿದೆವು, "ನಿಮ್ಮ ಕೊರಳಲ್ಲಿ ಲಿಂಗ, ಹಣೆಯ ಮೇಲೆ ವಿಭೂತಿ ಇದ್ದರೆ ಅಧಿಕಾರ ಕೈಬಿಡುವುದು" ಎಂದು ಯಾರಾದರೂ ಜ್ಯೋತಿಷಿಗಳು ಹೇಳಿರಬಹುದು. ಅದಕ್ಕೇ ಅವರೆಡಕ್ಕೂ ವಿಚ್ಛೇದನ ಕೊಟ್ಟಿರಬಹುದು. ಇಷ್ಟಾದರೂ ಲಿಂಗಾಯತ

ಮುಖ್ಯಮಂತ್ರಿಗಳು ಎಂಬ ಜಾತಿ ಬಿರುದು ತಪ್ಪಲಿಲ್ಲ.

ಶಿಷ್ಟಾಚಾರ ಎಂಬುದೊಂದು ಇರುತ್ತದೆ. ಜನರು ಗಮನಿಸುತ್ತಿರುತ್ತಾರೆ. ಪತ್ರಿಕೆಗಳು ವ್ಯಂಗ್ಯವಾಗಿ ಬರೆಯುವುದು ನೋಡಿ ನಮಗೆ ನಾಚಿಕೆ ಎನಿಸುತ್ತಿತ್ತು. ಒಮ್ಮೆಯಂತೂ ಕಾವೇರಿ ನದಿಗೆ ಶೋಭಾ ಕರಂದ್ಲಾಜೆ ಅವರ ಜೊತೆಗೆ ಹೋಗಿ ಬಾಗಿನ ಬಿಡುವ ದೃಶ್ಯ ಎಲ್ಲ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿತು. ಉಳಿದ ರಾಜಕಾರಣಿಗಳೆಲ್ಲ ಸಾಚಾ ಎಂದಲ್ಲ. ಆದರೆ ಅವರು ಬಹಿರಂಗವಾಗಿ ಶಿಷ್ಟಾಚಾರ ಮೀರಿ ಎಂದೂ ಕಾಣಿಸಿಕೊಳ್ಳಲಿಲ್ಲ. ದಿ|| ಜೆ.ಹೆಚ್. ಪಟೇಲರ ದೌರ್ಬಲ್ಯಗಳ ಬಗ್ಗೆ ಪತ್ರಿಕೆಗಳು ವ್ಯಂಗ್ಯವಾಗಿ ಬರೆಯುತ್ತಿದ್ದವು. ಆದರೆ ಎಲ್ಲಿಯೂ ಅವರು ಹೊರಗಡೆಯಲ್ಲಿ ತಮ್ಮ ದೌರ್ಬಲ್ಯವನ್ನು ಪ್ರದರ್ಶಿಸದೆ ಘನತೆಯನ್ನು ಕಾಯ್ದುಕೊಂಡರು.

ಚಿನ್ನದ ಮೊಟ್ಟೆಯ ಕೋಳಿ: ಜಗತ್ಪ್ರಸಿದ್ಧವಾದ ಒಂದು ಕಥೆ ಪ್ರಾಥಮಿಕ ಶಾಲೆಯ ಪಠ್ಯದಲ್ಲಿರುತ್ತದೆ. ಒಬ್ಬ ರೈತನ ಬಳಿ ಒಂದು ಕೋಳಿ ಇತ್ತು. ಅದು ಪ್ರತಿನಿತ್ಯ ಒಂದು ಚಿನ್ನದ ಮೊಟ್ಟೆ ಇಡುತ್ತಿತ್ತು. ಆಗ ರೈತನ ಪತ್ನಿ ಗಂಡನನ್ನು ಕುರಿತು ಹೀಗೆ ಹೇಳುತ್ತಿದ್ದಳು. "ಈ ಕೋಳಿ ದಿನಾಲೂ ಒಂದು ಚಿನ್ನದ ಮೊಟ್ಟೆ ಇಡುತ್ತದೆ. ಅದರ ಹೊಟ್ಟೆಯಲ್ಲಿ ಬಹಳಷ್ಟು ಮೊಟ್ಟೆ ಇರಬಹುದು. ಒಮ್ಮೆಲ್ಲೇ ಎಲ್ಲವನ್ನೂ ಪಡೆದರೆ ನಾವು ಬೇಗನೆ ದೊಡ್ಡ ಶ್ರೀಮಂತರಾಗಬಹುದು." ಒಮ್ಮೆ ರೈತನು ಕೋಳಿಯನ್ನು ಸೀಳಿದ. ಒಂದು ಮೊಟ್ಟೆಯೂ ಸಿಗದೇ ಬರೀ ಮಾಂಸ, ರಕ್ತ ಲಭ್ಯವಾದವು. ಆಗ ಪಶ್ಚಾತ್ತಾಪದಿಂದ ರೈತ ಕುದಿದು ಹೋದ. ದಿನಾಲೂ ಸಿಗುತ್ತಿದ್ದ ಒಂದು ಮೊಟ್ಟೆಯೂ ಸಿಗದಂತಾಯಿತಲ್ಲ ಎಂದು ಪರಿತಾಪ ಪಟ್ಟ.

ಈ ಉದಾಹರಣೆ ಶ್ರೀ ಯಡೆಯೂರಪ್ಪ ಮತ್ತು ಅವರ ಕುಟುಂಬದವರ ಆಸೆಯನ್ನು ಚಿತ್ರಿಸಲು ಬಹು ಉತ್ತಮ ಉದಾಹರಣೆ. ಮುಖ್ಯಮಂತ್ರಿ ಪದವಿ ಎಂಬ ಚಿನ್ನದ ಮೊಟ್ಟೆ ಇಡುವ ಕೋಳಿ ಇತ್ತು. ಅದರಿಂದ ದೊರೆಯುವ ಸೌಲಭ್ಯವಷ್ಟೇ ಸಾಲದೆಂಬಂತೆ ಏನೇನೋ ಹಗರಣಗಳನ್ನು ಸೃಷ್ಟಿ ಮಾಡಿಕೊಂಡರು. ಪರಿಣಾಮವಾಗಿ ಮುಖ್ಯಮಂತ್ರಿ ಪದವಿಯ ಕೋಳಿಯೇ ಬಲಿಯಾಯಿತು.

ಸ್ವಜಾತಿ ಪ್ರೇಮವಿದೆಯೆ? ಸ್ವಜನ (ಬಂಧು) ಪಕ್ಷಪಾತದ ಆರೋಪದ ಜೊತೆ ಅವರ ಸ್ವಜಾತಿ (ಲಿಂಗಾಯತ) ಪ್ರೇಮ ಕುರಿತು ಪತ್ರಿಕೆಗಳು ಟೀಕಿಸುತ್ತವೆ. ಇದು ಎಷ್ಟರ ಮಟ್ಟಿಗೆ ಸತ್ಯ. ಒಂದು ವೇಳೆ ಸ್ವಜಾತಿ ಪ್ರೇಮವಿದ್ದುದೇ ಆದರೆ ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿಯನ್ನಾಗಿ ವರಿಷ್ಠರು ಆಯ್ಕೆ ಮಾಡಿದಾಗ ಯಡೆಯೂರಪ್ಪ ತೀವ್ರವಾಗಿ ಅಡ್ಡಿ ಮಾಡುತ್ತಿರಲಿಲ್ಲ.

ಒಂದು ವಿಸ್ಮಯದ ಸಂಗತಿ ಎಂದರೆ ಶ್ರೀ ಬಿ.ಎಸ್.ವೈ ದಿನ ನಿತ್ಯ ಗುಡಿಗಳ ಸಂದರ್ಶನ ಬಿಟ್ಟರೆ ರಾಜಗುರುಗಳ ಪಾದ ದರ್ಶನದಲ್ಲೇ ಇರುತ್ತಿದ್ದರು. ಆದರೆ ಒಬ್ಬರೂ, ಅವರು ರಾಜ್ಯಮದದಿಂದ ಅಂಧರಾಗಿ ಏನೇನೋ ಮಾಡುತ್ತಿದ್ದರೆ, ಒಂದು ದಿನವೂ ಎಚ್ಚರಿಸಲಿಲ್ಲ, ಬುದ್ಧಿ ಹೇಳಲಿಲ್ಲ. ಸೂರ್ಯನು ಶಾಖವನ್ನು ಕಳೆದುಕೊಂಡಂತೆ ಗುರುಗಳು ಬುದ್ಧಿ ಹೇಳುವ ನೈತಿಕ ಸ್ಥೈರ್ಯ ಕಳೆದುಕೊಂಡ ಮೇಲೆ ಇನ್ನು ದಾರಿ ತೋರುವವರಾರು? ಹೀಗಾಗಿ ಅವರು ಲಿಂಗಾಯತರೆಂದು ವಿಭೂತಿ ಹಚ್ಚಿ ಅಧಿಕಾರಕ್ಕೆ ಬಂದರು; ವೈದಿಕರಾಗಿ ಕುಂಕುಮ ಹಚ್ಚಿ ಕೆಳಗೆ ಇಳಿದರು. ಕರ್ನಾಟಕದ ಇತಿಹಾಸದಲ್ಲಿ ಮೂರು ವರ್ಷ ಎರಡು ತಿಂಗಳ ದುರಾಡಳಿತದ ಒಂದು ಕರಾಳ ಅಧ್ಯಾಯ ಮುಗಿಯಿತು.

ನಮಗೆ ಯಾರು ಮುಖ್ಯಮಂತ್ರಿಯಾದರೂ ಅಷ್ಟೆ. ನಾವು ಯಾರನ್ನೂ ಓಲೈಸುವವರಲ್ಲ. ಅವರಿಂದ ಯಾವುದೇ ಲಾಭ ಮಾಡಿಕೊಳ್ಳುವ ಜಾಯಮಾನದವರಲ್ಲ. ಶ್ರೀ ಸದಾನಂದ ಗೌಡರು

ದಕ್ಷವಾಗಿ ಆಡಳಿತ ನಡೆಸಲಿ. ಯಡೆಯೂರಪ್ಪನವರು ಮಾಡಿದ ಅತಿರೇಕ, ಹುಚ್ಚಾಟಗಳನ್ನು ಮಾಡದೆ ಪ್ರೌಢವಾಗಿ ನಡೆದುಕೊಂಡು ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಿ; ಮಠಾಧೀಶರ ಆಜ್ಞಾನುವರ್ತಿಯಂತೆ ನಡೆಯದೆ ಸಂವಿಧಾನದ ಆಶಯಕ್ಕೆ ತಕ್ಕಂತೆ ನಡೆಯಲಿ ಎಂದು ಹಾರೈಸುವೆವು.

2. ಕೃಷ್ಣನ ಬಾಲ್ಯ ಮಾದರಿಯೆ?

ಹಿಂದು ಸೇವಾ ಪ್ರತಿಷ್ಠಾನದವರು ಪ್ರತಿ ವರ್ಷ ಶ್ರಾವಣ ಪೌರ್ಣಮೆಯನ್ನು ರಕ್ಷಾ ಬಂಧನದ ದಿನವನ್ನಾಗಿ ಆಚರಿಸಿ, ರಕ್ಷಾ ಬಂಧನ ಸಂದೇಶವನ್ನು ಅಂಚೆಯ ಮೂಲಕ ಕಳಿಸುತ್ತಾರೆ. ಈ ಸಲದ ಸಂದೇಶ ಪತ್ರದಲ್ಲಿ (ದಿ.13-08-11) ಹೀಗೆ ಬರೆಯಲಾಗಿದೆ. "ಮಕ್ಕಳ ಬಾಲ್ಯದ ಬಗ್ಗೆ ವರ್ಣಿಸುವದಕ್ಕೆ ಶ್ರೀ ಕೃಷ್ಣನ ಉದಾಹರಣೆಗಿಂತ ಮತ್ತೊಂದು ಸಿಗಲಾರದು. ನಂದನವನದಲ್ಲಿನ ಅವನ ಬಾಲ ಲೀಲೆಗಳು ಕೇವಲ ಆನಂದ ಉಂಟು ಮಾಡುವುದಷ್ಟೆ ಅಲ್ಲ, ಮಕ್ಕಳ ಬಾಲ್ಯವನ್ನು ಕುರಿತು ಅಧ್ಯಯನ ಮಾಡುವವರಿಗೆ ಒಂದು ಸಮಗ್ರ ಕೈಪಿಡಿಯಾಗಿದೆ".

ವೈದಿಕ ಮತ್ತು ವೈಷ್ಣವ ವಿಚಾರಧಾರೆಯೇ ಬಹಳ ವಿಲಕ್ಷಣವಾಗಿದೆ, ವೈಚಾರಿಕತೆಗೆ ಅದು ವಿರುದ್ಧವಾಗಿರುವುದರಿಂದ ಹಿಂದುಗಳ ಮನಸ್ಸನ್ನು ವಿಚಲಿತಗೊಳಿಸಲಾರದಂತೆ ವೈದಿಕ ಮತ್ತು ವೈಷ್ಣವ ವಿಚಾರಗಳನ್ನು ಏಕಮುಖವಾಗಿ ಸಮರ್ಥಿಸಲಾಗುವುದು. ಸಂವಾದಕ್ಕೆ ಅವಕಾಶವೇ ಇಲ್ಲದಂತೆ ಕೇವಲ ನಂಬಿಕೆ ಮಾತ್ರ ಬೆಳೆಯುವಂತೆ ಪುನಃ ಪುನಃ ಹೇಳಲಾಗುವುದು.

ಶ್ರೀ ಕೃಷ್ಣನ ಬಾಲ್ಯದ ಜೀವನವಾಗಲಿ, ಯೌವ್ವನದ ಜೀವನವಾಗಲಿ ಯಾವುದೇ ಆದರ್ಶವನ್ನು ಬಿಂಬಿಸುವುದಿಲ್ಲ. ಮಗುವಿದ್ದಾಗ ತಮ್ಮ ಮನೆಯಲ್ಲೂ ಬೆಣ್ಣೆ ಕದಿಯುತ್ತಿದ್ದನು ತುಂಟ ಹುಡುಗರೊಡನೆ ಸೇರಿ ಇತರರ ಮನೆಯಲ್ಲೂ ಕದಿಯುತ್ತಿದ್ದ. ಬುದ್ಧ, ಬಸವ, ವಿವೇಕಾನಂದ ಮುಂತಾದವರ ಬಾಲ್ಯ ನೋಡಿದರೆ ಅವರ ಸಾತ್ವಿಕ ನಡೆ, ವೈಚಾರಿಕತೆ, ಅಂತರ್ಮುಖಿ ವ್ಯಕ್ತಿತ್ವ ಕಾಣತ್ತೇವೆ. ಅಂಥ ಒಂದು ಪ್ರೌಢ ಲಕ್ಷಣವೂ ಶ್ರೀ ಕೃಷ್ಣನ ಬಾಲ್ಯದಲ್ಲಿ ಕಾಣುವುದಿಲ್ಲ.

ನಂತರ, ಗೋಪಿಕೆಯರು ಗಡಿಗೆಯಲ್ಲಿ ಹಾಲು ಮೊಸರು ಒಯ್ಯುತ್ತಿದ್ದರೆ ತುಂಟ ಹುಡುಗರೊಡನೆ ಕಲ್ಲು ಎಸೆದು ಆ ಗಡಿಗೆ ಒಡೆಯುವ ಚೇಷ್ಟೆಯನ್ನು ಕಾಣುತ್ತೇವೆ. ಗೋಪಿಕಾ ಸ್ತ್ರೀಯರು ಕೊಳದಲ್ಲಿ ಸ್ನಾನ ಮಾಡುತ್ತಿದ್ದರೆ ದಂಡೆಯ ಮೇಲೆ ಇಟ್ಟಿದ್ದ ಬಟ್ಟೆಗಳನ್ನು ಎತ್ತಿ ಮುಚ್ಚಿಟ್ಟು ಕಾಡಿಸುವ ಚೇಷ್ಟೆಯನ್ನು ಕಾಣುತ್ತೇವೆ. ಇವೆಲ್ಲ ಉಡಾಳ ಹುಡುಗರ ಲಕ್ಷಣವಲ್ಲದೆ ಸಾತ್ವಿಕ ಹುಡುಗರ ಲಕ್ಷಣವಲ್ಲ ಮತ್ತು ನಂತರ ಯೌವನದಲ್ಲಿ ರಾಧೆಯ ಜೊತೆಗೆ ಅದೂ ವಿವಾಹಿತಳಾದ ಮಹಿಳೆಯ ಜೊತೆಗೆ ನಡೆಸುವ ಸರಸ ಸಲ್ಲಾಪ ತೀರಾ ನಾಚಿಕೆಗೇಡು. ವೈಷ್ಣವರು ಈ ಲೀಲೆಗಳನ್ನು ವರ್ಣಿಸುವ ಭಾಗವತವನ್ನು ಹಾಡಿ ಹಾಡಿ ಭಜಿಸುತ್ತಾರೆ; ರಾಧಾ ಗೋವಿಂದ, ರಾಧಾ ಕೃಷ್ಣ ಎಂದು ಭಜನೆ ಮಾಡುವುದು ನೋಡಿದರೆ ನಿಜಕ್ಕೂ ನಾಚಿಕೆ ಎನಿಸುತ್ತಿದೆ. ಜಯದೇವ ಎನ್ನುವ ಓರ್ವ ಬೆಂಗಾಲಿ ಕವಿ ಗೀತ ಗೋವಿಂದ ಎಂಬ ಕೃತಿಯನ್ನು ಬರೆದು ರಾಧೆ, ಕೃಷ್ಣರ ವಿರಹವನ್ನು ಬಗೆಬಗೆಯಾಗಿ ಬಣ್ಣಿಸುತ್ತಾನೆ. ವಿಧ್ಯುಕ್ತವಾಗಿ ವಿವಾಹವಾದ ರುಕ್ಮಿಣಿ, ಸತ್ಯಭಾಮ ಎಲ್ಲಿರುವರೋ ಇಸ್ಕಾನ್ ಟೆಂಪಲ್‌ಗಳಲ್ಲಿ ರಾಧಾ ಕೃಷ್ಣರದೇ ಹಾವಳಿ. ಹಿಂದು ಧರ್ಮದ ದೇವತೆಗಳು, ಅವುಗಳ ಲೀಲೆ, ಸನ್ಯಾಸಿಗಳು ಸಹ ಅವನ್ನು ಭಕ್ತಿಯಿಂದ ಹಾಡುವುದು ನೋಡಿದಾಗ ವೈಚಾರಿಕ ದಾರಿದ್ರ್ಯ ಎದ್ದು ಕಾಣುತ್ತದೆ, ಆದರಿದನ್ನು ಸಮರ್ಥಿಸಿಕೊಳ್ಳುವುದು ಅವಿವೇಕ ರಮಣೀಯ.

ಭಾಗ -34 - ಮಾತಾಜಿ

ಬಸವ ವಚನಾಮೃತ

584. ಲಿಂಗಜ್ಞಾನವೇ ಶ್ರೇಷ್ಠ

ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನರಿಯದೆ
ಉದಮದ ಸೊಕ್ಕಿ ತಲೆಗೇರಿತ್ತೆ, ಅಯ್ಯಾ!
ಜೀವೋ ಜೀವೇನ ಭಕ್ಷ್ಯತೇ : ಕರ್ಮಕರ್ಮದಲ್ಲಿಪ್ಪೆಯಯ್ಯಾ!
ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ-
ಘೋಳಿಡಲಿ ಘೋಳಿಡಲಿ ತಂದಿಕ್ಕೆ ಅಕ್ಕಿತ್ತೆ! ವೇದಶಾಸ್ತ್ರಂಗಳು
ಮೂರುತಿಗೊಂಡಲ್ಲಿ ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೆ ಅಯ್ಯಾ!
ನಮ್ಮ ಲಿಂಗದೇವರನರಿಯದ ಕಾರಣ ನಾಯಕ ನರಕದಲ್ಲಿಕ್ಕಿತ್ತಯ್ಯಾ.

-ಬ.ವ.ದೀ. 582

ಮನುಷ್ಯನಾಗಿ ಹುಟ್ಟಿದ ಮೇಲೆ ಪರಮಾತ್ಮನ ಜ್ಞಾನವನ್ನು ಹೊಂದಬೇಕು. ಇದು ಪ್ರತಿಯೊಬ್ಬನ ಆದ್ಯ ಕರ್ತವ್ಯ. ಯೌವನ ಮದ, ಕುಲ ಮದ, ಧನಮದ ಇತ್ಯಾದಿ ತಲೆಗೇರಿ ದೇವರು - ಧರ್ಮ, ಆತ್ಮ - ಪರಮಾತ್ಮ ಮುಂತಾದವುಗಳಲ್ಲಿ ಅವಿಶ್ವಾಸ ತಾಳಿ ಕೆಲವರು ಮದಾಂಧರಾಗಿ ವರ್ತಿಸುವರು. ಮತ್ತೆ ಕೆಲವರು ಜೀವವು ಜೀವವನ್ನು ಕೊಂದು ಬದುಕುತ್ತಿದೆ. ಸಣ್ಣ ಮೀನನ್ನು ದೊಡ್ಡ ಮೀನು, ಕ್ರೂರ ಪ್ರಾಣಿಗಳು ಸಾತ್ವಿಕ ಪ್ರಾಣಿಗಳನ್ನು ಕೊಲ್ಲುವುದಿಲ್ಲವೆ? ಆದರಂತೆ ನಾವೂ ಮಾಂಸಾಹಾರವನ್ನು ಮಾಡುತ್ತೇವೆ ಎಂದು ಹೇಳುತ್ತ ಕರ್ಮಬಂಧನವನ್ನು ವಿಸ್ತರಿಸುತ್ತ ಹೋಗುವರು. ಅಂದೊಮ್ಮೆ ದಕ್ಷಬ್ರಹ್ಮನು ಪುರೋಹಿತರ ಸಲಹೆಯಂತೆ ಅಜಯಾಗವನ್ನು ಮಾಡಿ ಹೋತವನ್ನು ಬಲಿಗೊಟ್ಟಾಗ ವೀರಭದ್ರನು ಈ ಹಿಂಸಾತ್ಮಕ ಯಜ್ಞವನ್ನು ನಿಲ್ಲಿಸಲು ಉಗ್ರ ಹೋರಾಟ ಮಾಡಿದಾಗ ವೇದಶಾಸ್ತ್ರಗಳು ರಕ್ಷಣೆಗೆ ಬಂದಿತೆ? ಚತುರ್ವೇದ ಪಾರಂಗತರಾರೂ ಈ ಧರ್ಮಯುದ್ಧವನ್ನು ಎದುರಿಸಲು ಆಗಲಿಲ್ಲವಲ್ಲ! ಮದಾಂಧರು, ಹಿಂಸಾ ವೃತ್ತಿಯವರು ಮತ್ತು ಶಾಸ್ತ್ರದ ಹೆಸರಿನಲ್ಲಿ ಹಿಂಸೆಯನ್ನು ಮಾಡುವವರು ಇವರು ಯಾರೂ ದೇವರ ಸ್ವರೂಪವನ್ನು ಅರಿಯದವರಾದ ಕಾರಣ ಇವರಿಗೆ ನಾಯಕ ನರಕವೇ ಗತಿ.

585. ಬೆಂಕಿ ದೇವರೆ?

ಕಿಚ್ಚು ದೈವವೆಂದು ಹವಿಯನ್ನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ, ಬೀದಿಯ ಧೂಳವ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ!
ಲಿಂಗದೇವಾ ವಂದನೆಯ ಮರೆದು ನಿಂದಿಸುತ್ತಿದ್ದರು.

-ಬ.ವ.ದೀ. 583

ಬೆಂಕಿಯು ಜೀವನಾವಶ್ಯಕತೆಗಳಲ್ಲಿ ಒಂದು, ಗಾಳಿ ನೀರು ಮುಂತಾದುವಂತೆ. ಪುರಾತನ ಮಾನವನು ಅಗ್ನಿಯ ಆವಿಷ್ಕಾರವಾದಾಗ ಸೋಜಿಗ ಪಟ್ಟ, ಸಂಭ್ರಮಿಸಿದ. ಅಗ್ನಿಯ ಕತ್ತಲೆ

ಹರಿಯುವ ಗುಣ, ಬೇಯಿಸಿ ವಸ್ತುವಿಗೆ ರುಚಿಕೊಡುವ ಗುಣಗಳಿಂದ ಅದಕ್ಕೆ ಬಹಳ ಮಹತ್ವ ದೊರೆತಿತು.

ಕಾಡುಗಿಡಗಳು ತಾಡಿಸಿದಾಗ ಹುಟ್ಟದ ಬೆಂಕಿ, ಚಕ್ಕಮುಕ್ಕಿ ಕಲ್ಲು (ಸೂರ್ಯಕಾಂತ ಉಷ್ಣಶಿಲೆ) ಕುಟ್ಟದಾಗ ಉತ್ಪತ್ತಿಯಾದ ಬೆಂಕಿಯನ್ನು ತುಂಬಾ ಜೋಪಾನವಾಗಿ ಕಾಯ್ದುಕೊಳ್ಳ ಲಾಗುತ್ತಿತ್ತು. ಕೆಲವರಿಗೆ ಬೆಂಕಿಯನ್ನು ಕಾಯುವುದೇ ಒಂದು ಕಾಯಕವಾಗಿತ್ತು. ಮನೆಗಳಲ್ಲಿ ಬೆಂಕಿ ಆರದಂತೆ ಜನರು ಎಚ್ಚರವಹಿಸುತ್ತಿದ್ದರು. ಆರಿದರೆ ಬೆಂಕಿ ಇದ್ದವರ ಮನೆಗೆ ಹೋಗಿ ಕೆಂಡವನ್ನು ತಂದುಕೊಂಡು ತಮ್ಮ ಮನೆಯ ಒಲೆ ಹಚ್ಚಿಕೊಳ್ಳುತ್ತಿದ್ದರು.

ಅಗ್ನಿಗೆ ವೈದಿಕ ಧರ್ಮದಲ್ಲಿ ಬಹುದೊಡ್ಡ ಸ್ಥಾನ. ಅಗ್ನಿ ಸಾಕ್ಷಿಯ ಮದುವೆ,ಅಗ್ನಿ ಕುಂಡ ದಲ್ಲಿ ಹವಿಸ್ಸು-ಇತ್ಯಾದಿ ಎಲ್ಲ ಎಲ್ಲದಕ್ಕೂ ಅಗ್ನಿ ಬೇಕು. ಹೀಗಾಗಿ ವೈದಿಕರು ಅಗ್ನಿಯನ್ನು ದೈವ ಎಂದು ವೈಭವೀಕರಿಸಿದರು. ಗುರು ಬಸವಣ್ಣನವರಿಗೆ ಅಗ್ನಿಯ ವೈಭವೀಕರಣ ಅರ್ಥರಹಿತ ಎನಿಸುತ್ತದೆ. ಅದಕ್ಕಾಗಿ ಅಗ್ನಿಯನ್ನು ಕಿಚ್ಚು ಎಂದು ಹಗುರವಾಗಿ ಕರೆಯುತ್ತಾರೆ.

ಬೆಂಕಿ ದೇವರು ಎಂದು ಪ್ರೀತಿಯಿಂದ ಹವಿ (ತುಪ್ಪ) ಯನ್ನು ಹಾಕುವ ಬ್ರಾಹ್ಮಣನ ಮನೆಗೆ ಆಕಸ್ಮಾತ್ ಬೆಂಕಿ ಬಿದ್ದಿತು ಎಂದುಕೊಳ್ಳೋಣ. ಆಗ ಆ ಬ್ರಾಹ್ಮಣನು, "ದೇವಾ, ನೀನು ನಾವು ಕೊಡುವ ಸಣ್ಣ ಸಣ್ಣ ವಸ್ತುಗಳಿಂದ ತೃಪ್ತನಾಗದೆ ನಮ್ಮ ಮನೆಯನ್ನೇ ಆಹುತಿ ತೆಗೆದುಕೊಳ್ಳು ತ್ತಿರುವೆಯಲ್ಲ ಧನ್ಯವಾದ" ಎಂದು ನಮನ ಮಾಡದೆ, ಬಾಯಿ ಬಡಿದುಕೊಳ್ಳುತ್ತ "ದರಿದ್ರ ಬೆಂಕಿ, ನಮ್ಮ ಮನೆಯನ್ನೇ ಆಪೋಶನ ಕೊಂಡಿತಲ್ಲ." ಎಂದು ಬೈದಾಡುವನು. ಬಚ್ಚಲ ನೀರು, ಬೀದಿಯ ಧೂಳು ತಂದು ಎರಚುವರು. ಬೊಬ್ಬಿಟ್ಟು ಎಲ್ಲರನ್ನೂ ಸಹಾಯಕ್ಕೆ ಕರೆಯುವರು.

ಪಂಚಭೂತಗಳನ್ನೇ ದೇವರು ಎನ್ನಬಾರದು. ಪಂಚಭೂತಗಳ ಕರ್ತೃವಾದ ಪರಮಾತ್ಮನನ್ನು ಮಾತ್ರ ದೇವರು ಎಂದು ಆರಾಧಿಸಬೇಕು.

586. ವಿಚಾರ ಹೀನರ ಭಕ್ತಿ-ವ್ಯರ್ಥ

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ!
"ಭರ್ಗೋ ದೇವಸ್ಯ ಧೀಮಹಿ" ಎಂಬರು;
ಒಬ್ಬರಿಗಾದರೂ ವಿಚಾರವಿಲ್ಲ, ನೋಡಿರೆ! ಲಿಂಗದೇವಾ

-ಬ.ವ.ದೀ. 583

ವೇದ ಶಾಸ್ತ್ರತರ್ಕ ಪ್ರವೀಣರಾದ ಬ್ರಾಹ್ಮಣರು ಶಾಸ್ತ್ರದಾಸ್ಯದ ಪ್ರವಾಹದಲ್ಲಿ ಕೊಚ್ಚಿ ಕೊಂಡು ಹೋಗುವ ದುರಂತವನ್ನು ನೋಡಿರಿ. ಅವರಲ್ಲಿ ದ್ವಂದ್ವ ನಿಲುವಿದೆ. "ಭರ್ಗೋ ದೇವಸ್ಯ ಧೀಮಹಿ;ಭರ್ಗನೊಬ್ಬನೇ ದೇವ" ಎಂದು ಹೇಳುವರು. ಪುನಃ ಹಲವಾರು ದೇವತೆಗಳಾದ ಅಗ್ನಿ, ಇಂದ್ರ, ಯಮ, ವಾಯು, ನವಗ್ರಹ ಮುಂತಾದುವನ್ನು ಆರಾಧಿಸುವರು. ಒಬ್ಬರಿಗಾದರೂ ವಿಚಾರ ಶಕ್ತಿ ಇಲ್ಲ ನೋಡಿರಿ.

ಒಬ್ಬರ ಮನೆಗೆ ಊಟಕ್ಕೆ ಆಹ್ವಾನಿಸಿರುತ್ತಾರೆ. ಬಹಳ ಚೆನ್ನಾಗಿ ಆತಿಥ್ಯ ಮಾಡುತ್ತಾರೆ! ಆಗ ಅತಿಥಿಗಳು ಮನೆಯ ಮಾಲಿಕರನ್ನು ಕೊಂಡಾಡುವರು. ಅವರಿಗೆ ಧನ್ಯವಾದ ಹೇಳುವರಲ್ಲವೆ? ಅದು ಬಿಟ್ಟು ಕೂಲಿ ತೆಗೆದುಕೊಂಡು ಅಡಿಗೆ ಮಾಡಿಟ್ಟ ಅಡಿಗೆಯವನಿಗೆ ಧನ್ಯವಾದ ಹೇಳುವರೆ?

ಹಾಗೆ ಈ ಜಗತ್ತನ್ನು, ಪಂಚಭೂತಗಳನ್ನು, ಜೀವಾತ್ಮರನ್ನು ಸೃಷ್ಟಿಸಿದ ದೇವನಿಗೆ ನಾವು ಕೃತಜ್ಞತೆ ಸಲ್ಲಿಸಬೇಕಲ್ಲದೆ ದೇವನ ಆಜ್ಞೆಯಲ್ಲಿ ಕ್ರಿಯಾಶೀಲವಾಗಿರುವ ಪಂಚಭೂತಗಳಿಗಲ್ಲ.

587. ಭಕ್ತಿಯ ಅರ್ಚನೆಯೇ ಮುಖ್ಯ

ಎನಿಸನೋದಿದಡೇನು? ಎನಿಸ ಕೇಳಿದಡೇನು?
ಚತುರ್ವೇದಪಾಠ ತೀವ್ರವಾದಡೇನು?
ಲಿಂಗಾರ್ಚನೆ ಹೀನವಾದಡೆ, ಶಿವಶಿವಾ,
ಬ್ರಾಹ್ಮಣನೆಂಬೆನೆ ? ಎನಲಾಗದು.
ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।
ಶ್ರುತೇನ ಶ್ರೋತ್ರೀಯಶ್ಚೈವ ಬ್ರಹ್ಮ ಚರತಿ ಬ್ರಾಹ್ಮಣ॥ ಎಂದುದಾಗಿ
'ಬ್ರಹ್ಮನಾಸ್ತಿ ಶ್ಚ ಶ್ವಪಚರಧಮರೆಂ' ದುದಾಗಿ,
ಇದು, ಕಾರಣ ಲಿಂಗದೇವಾ,
ವೇದಭಾರಭರಾಕ್ರಾಂತಾ ಬ್ರಾಹ್ಮಣಾಃ ಗಾರ್ದಭಾಃ' ಎಂಬೆನು.!

-ಬ.ವ.ದೀ. 585

ವೇದ ಶಾಸ್ತ್ರಪುರಾಣಗಳನ್ನು ಎಷ್ಟು ಓದಿದರೇನು, ಎಷ್ಟು ಬಾರಿ ಕೇಳಿದರೇನು? ನಾಲ್ಕು ವೇದಗಳಾದ ಋಗ್ವೇದ, ಸಾಮವೇದ, ಅಥರ್ವಣ, ಯಜುರ್ವೇಧ ಮುಂತಾದವು ಬಾಯಿ ಪಾಠವಾದರೇನು? ಲಿಂಗಾರ್ಚನೆ ಮಾಡದೆ ಇದ್ದರೆ, ಸೃಷ್ಟಿಕರ್ತನನ್ನು ಕೃತಜ್ಞತೆಯಿಂದ ಆರಾಧಿ ಸದೆ ಇದ್ದರೆ ಅವನು ಬ್ರಾಹ್ಮಣನೇ ಅಲ್ಲ.ಬ್ರಾಹ್ಮಣನ ಲಕ್ಷಣ ಸದ್ಭಕ್ತಿ, ಸದಾಚಾರ. ಸ್ವತಃ ವೈದಿಕ ಶಾಸ್ತ್ರಗಳೇ ಹೇಳುತ್ತವೆ, ಹುಟ್ಟುತ್ತ ಎಲ್ಲರೂ ಶೂದ್ರರೆ, ಮಾಡುವ ಕ್ರಿಯೆಗಳಿಂದ ಬ್ರಾಹ್ಮಣತ್ವ ಪ್ರಾಪ್ತಿಯಾಗಿ ಶ್ರೇಷ್ಠನೆನಿಸಿಕೊಳ್ಳುವನು. ಶ್ರುತಿಯನ್ನು ಕೇಳುವವನು, ಮನನ ಮಾಡಿಕೊಳ್ಳುವವನು ಶ್ರೋತ್ರೀಯ (ಬ್ರಹ್ಮನಿಷ್ಠ) ನಾದರೆ ಬ್ರಹ್ಮವನ್ನು ಅರಿತು ಕೊಂಡವನು ಬ್ರಾಹ್ಮಣ. ಬ್ರಹ್ಮಜ್ಞಾನ ವಿಲ್ಲದವನು ಶ್ವಪಚ, ಅಧಮ ಎನಿಸಿಕೊಳ್ಳುವನು.ಆದ್ದರಿಂದ, ಲಿಂಗದೇವಾ, ವೇದಗಳ ಆಂತರ್ಯ ವನ್ನು ತಿರುಳನ್ನು ಅರಿಯದೆ ಕೇವಲ ಯಾಂತ್ರಿಕವಾಗಿ ಉಚ್ಚರಿಸುವವನು (ಸಕ್ಕರೆ) ಮೂಟೆ ಹೊರುವ ಕತ್ತೆಯಂತೆಯೇ ಸರಿ!

588. ತೊರೆ ಶುದ್ಧಗೊಳಿಸದು

ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು!
ನಿಮಗೆರಗದ ಕಾರಣ ಕೊರಳಲ್ಲಿ ನೇಣು!
ಹಿಂಡಲೇಕೋ? ತೊಳೆಯಲೇಕೋ?
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ?
ಲಿಂಗದೇವನ ಶರಣರಲ್ಲಿ
ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?

-ಬ.ವ.ದೀ. 586

ದೇವರೆ, ನಿಮ್ಮಸ್ವರೂಪವನ್ನರಿಯದೆ ಬಹುದೇವೋಪಾಸಕರಾಗಿ ಇರುವ ವಿಪ್ರರು ಕೈಯಲ್ಲಿ ಹುಲ್ಲು(ಗರಿಕೆ) ತೆಗೆದುಕೊಂಡು ಧಾರ್ಮಿಕ ವಿಧಿವಿಧಾನ ನಡೆಸುವರು. ಜ್ಯೋತಿ ಸ್ವರೂಪನಾದ ನಿನಗೆ ಶರಣಾಗದೆ ಕೇವಲ ವರ್ಣ, ಜಾತಿ ಸಂಕೇತವಾದ ಜನಿವಾರಕ್ಕೆ ಮಹತ್ವ ಕೊಡುವರು. ಇದು ಒಂದು ರೀತಿಯ ಕಟ್ಟುಪಾಡಿಗೆ ಬಂಧಿಸುವ ಹಗ್ಗವೇ ಸರಿ! ವಿಚಿತ್ರವಾದ ಮಡಿ - ಮೈಲಿಗೆಯ ಆಚರಣೆಯನ್ನು ಮಾಡುತ್ತ ವಿಪ್ರಕುಲದವರು ಮೈಲಿಗೆಯಾಯಿತೆಂಬ ಭ್ರಾಂತಿಯಿಂದ ಬಟ್ಟೆಗಳನ್ನು ನೀರಿನಲ್ಲಿ ಅದ್ದಿ ಹಿಂಡುವರು. ಬಾವಿ ಹಗ್ಗ, ಕೊಡ ಮುಂತಾದುವನ್ನು ಪುನಃ ಪುನಃ ತೊಳೆಯುವರು. ನೀರಿನಲ್ಲಿ ಮೂಗು ಹಿಡಿದು ಮುಳುಗುವರು ಈ ಎಲ್ಲ ಕರ್ಮಠ ಆಚರಣೆ ದೇವರ ಕೃಪೆಯನ್ನು ದೊರಕಿಸಿಕೊಡಲಾರವು. ನಮ್ಮ ಲಿಂಗದೇವನ ಶರಣರಲ್ಲಿ ಅಗ್ರಗಣ್ಯರಾದ ಡೋಹರ ಕಕ್ಕಯ್ಯನವರು ಯಾವ ನದಿಯನ್ನು ಮೀಯಲು ಹುಡುಕಿಕೊಂಡು ಹೋದರು?

589. ಭಕ್ತನೇ ಕುಲಜನು

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು!
ಕುಲವನರಸದಿರಿಂ ಭೋ ಕುಲದಿಂದ ಮುನ್ನೇನಾದಿರಿಂ ಭೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ, ಕಾಣ ಭೋ?
ನಮ್ಮ ಲಿಂಗದೇವನ ವಚನವಿಂತೆಂದುದು;
ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ.

-ಬ.ವ.ದೀ. 587

ವರ್ಣವಾದ ಜಾತಿವಾದ ಅತ್ಯಂತ ಪ್ರಬಲವಾಗಿರುವ ಈ ದೇಶದಲ್ಲಿ ಹುಟ್ಟಿ ಮಹಿಮಾನ್ವಿತರಾಗಿ ಹೋದ ಅನೇಕರು ಸಾಮಾಜಿಕವಾಗಿ ಕೆಳವರ್ಗದವರೆಂದು ಭಾವಿಸಿದ ಕುಲಗಳಲ್ಲಿ ಹುಟ್ಟಿದವರು. ಉದಾ: ವ್ಯಾಸ, ಮಹಾಭಾರತವನ್ನು, 18 ಪುರಾಣಗಳನ್ನು ಬರೆದ ವ್ಯಾಸ ಅಂಬಿಗ ಜಾತಿಯ ತಾಯಿಯಲ್ಲಿ ಪರಾಶರ ಮುನಿಯಿಂದ ಹುಟ್ಟಿದನು. ಮಾರ್ಕಂಡೇಯನೆಂಬ ಮಹಾಮುನಿ ಚಂಡಾಲ ಸ್ತ್ರೀಯಲ್ಲಿ ಹುಟ್ಟಿದವನು. ರಾವಣನ ಪಟ್ಟದ ರಾಣಿ ಮಂಡೋದರಿ ಮಂಡೂಕ ವಂಶದವಳು.

ಆದ್ದರಿಂದ, ಎಲೈ ಮಂದಮತಿಗಳೇ ಕುಲದಿಂದ ಮೇಲು ಕೀಳು ಎಂದು ಅಳೆಯದಿರಿ. ಸಮುದ್ರವನ್ನೇ ಆಪೋಶನ ತೆಗೆದುಕೊಂಡ ಅಗಸ್ತ್ಯ ಕಬ್ಬಿಲಿಗ ಜಾತಿಯಲ್ಲಿ ಹುಟ್ಟಿದವನು, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಣ್ಯನೆಂಬ ಋಷಿ ಇಡೀ ಜಗತ್ತಿಗೇ ಗೊತ್ತಿರುವಂತೆ ಕ್ಷೌರಿಕ. ಆದ್ದರಿಂದ ನನ್ನ ದೃಢವಾದ ವಚನ ಎಂದರೆ ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದವನಾದರೇನು ಭಕ್ತಿವಂತನಾದವನೇ ಕುಲಜನು.

590. ಲಿಂಗಸ್ಥಲವನರಿದವನೇ ಕುಲಜನು

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ

ಜಲ-ಬಿಂದುವಿನ ವ್ಯವಹಾರ ಒಂದೇ;
ಆಸೆಯಾಮಿಷರೋಷಹರುಷ ವಿಷಯಾದಿಗಳೆಲ್ಲಾ ಒಂದೆ.
ಏನನೋದಿ, ಏನಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?
ಎಂಬುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ
ಲಿಂಗಸ್ಥಲವನರಿದವನೆ ಕುಲಜನು !

-ಬ.ವ.ದೀ. 588

ಹೊಲೆ ಎಂದರೆ ಮುಟ್ಟು. ರಜಸ್ಸು ಸ್ತ್ರೀಯರಲ್ಲಿ ಕಂಡ ಬಳಿಕವೇ, ಬಾಲಿಕೆಯು ಋತಿಮತಿ ಯಾದ ಮೇಲೆಯೇ ಬೇರೊಂದು ಜೀವವು ನೆಲೆ ಹೊಂದಲು ಸಾಧ್ಯ. ಹೀಗೆ ಇಡೀ ಜಗತ್ತಿನಲ್ಲಿ ಜೀವರಾಶಿ ಹುಟ್ಟುವುದು ಈ ರಜಸ್ಸಿನಲ್ಲಿಯೆ! ಹುಟ್ಟಿ-ಬಂದಾನಂತರ ಮಲ, ಮೂತ್ರ, ವೀರ್ಯ ಮುಂತಾದ ಎಲ್ಲ ಕ್ರಿಯೆಗಳು ಒಂದೆಯೇ! ಆಸೆ -ಆಮಿಷ, ರೋಷ - ಹರುಷ, ವಿಷಯ ಮುಂತಾದ ಮಾನಸಿಕ ಚಟುವಟಿಕೆಗಳೂ ಒಂದೆಯೇ!

ಶಾಸ್ತ್ರಗಳನ್ನು ಸತತವಾಗಿ ಓದುತ್ತಾರೆ, ನಿರಂತರವಾಗಿ ಕೇಳುತ್ತಾರೆ. ಅವುಗಳಲ್ಲಿ ಪರಮಾತ್ಮನು ಸರ್ವವ್ಯಾಪಿ, ಎಲ್ಲ ಜೀವಾತ್ಮರೂ ಸಮಾನರು ಎಂದೆಲ್ಲ ಹೇಳಲಾಗುವುದು. ಇಂಥ ಉದಾರವಾದ ಮಾತುಗಳನ್ನು ಓದಿ, ಕೇಳಿ ಏನು ಫಲ? ಮತ್ತೂ ಕುಲ ಹಿಡಿದು ಮೇಲು -ಕೀಳೆಂದು ಏಂಗಡಿಸುತ್ತಾರೆ. ಒಬ್ಬ ವ್ಯಕ್ತಿ ಶ್ರೇಷ್ಠ ಕುಲದವನು ಎಂದು ಹೇಳಲು ಏನು ಸಾಕ್ಷಿ? ಈ ಶರೀರವು ಸಪ್ತಧಾತುಗಳಾದ ರಸ, ರುಧಿರ, ಮಾಂಸ, ಮೇದಸ್, ಅಸ್ಥಿ, ಮಜ್ಜೆ, ಶುಕ್ಲ ಎಂಬವುಗಳಿಂದಾಗಿದೆ. ಎಲ್ಲರೂ ಹುಟ್ಟುವುದೂ ಒಂದೇ ಬಗೆಯಲ್ಲಿ, ಎಲ್ಲರೂ ಆತ್ಮ ಮತ್ತು ಜೀವಗಳ ಸಂಯೋಗಿಗಳೆ ! ವರ್ಣ ವ್ಯವಸ್ಥೆಯಿಂದ ಯಾವ ಪ್ರಯೋಜನವಿದೆ? ಇದರಲ್ಲಿ ಏನು ಅರ್ಥವಿದೆ?

ಕಬ್ಬಿಣವನ್ನು ಕಾಸಿ ಒಬ್ಬ ಕಮ್ಮಾರನಾದ, ಬಟ್ಟೆಯನ್ನು ತೊಳೆದು ಮಡಿವಾಳನಾದ, ಬಟ್ಟೆಯನ್ನು ನೇಯ್ದು ನೇಕಾರನಾದ, ಅದರಂತೆ ವೇದಗಳ ಜ್ಞಾನ ಪಡೆದವನು ಹಾರುವನಾದ. ಕಿವಿಯಲ್ಲಿ ಯಾರಾದರೂ ಹುಟ್ಟಿ ಬರುವರೆ? ಹಾಗೆ ಬ್ರಾಹ್ಮಣನೇನು ಬೇರೊಂದು ರೀತಿಯಲ್ಲಿ ಹುಟ್ಟಿ ಬರುವುದಿಲ್ಲ, ಶೂದ್ರನು ಇನ್ನೊಂದು ರೀತಿ ಹುಟ್ಟಿ ಬರುವುದಿಲ್ಲ. ಆದ್ದರಿಂದ ಲಿಂಗದೇವನೇ ಯಾರು ನಿಮ್ಮ ಸ್ವರೂಪಜ್ಞಾನ ಹೊಂದುವನೋ ಅವನೇ ಕುಲಜನು! .

ಇದು ಬಹಳ ಮಹತ್ವಪೂರ್ಣ ವಚನ, ಸಾಮಾಜಿಕ ಧಾರ್ಮಿಕ ಸಮಾನತೆಯನ್ನು ಸಾರುವ ವಚನ. ಮಾನವ ಸಮಾಜದಲ್ಲಿ ಜೀವನಾವಶ್ಯಕತೆಗಳ ಪೂರೈಕೆಗಾಗಿ ಬೇರೆ ಬೇರೆ ಉದ್ಯೋಗಗಳು

ನಿರ್ಮಾಣಗೊಂಡವು. ಉದ್ಯೋಗಗಳ ವರ್ಗೀಕರಣ ತಪ್ಪಲ್ಲ. ಭಾರತ ದೇಶದಲ್ಲಿ ದುರ್ದೈವವೆಂಬಂತೆ ಉದ್ಯೋಗಗಳ ವರ್ಗೀಕರಣದ ಜೊತೆಗೆ ಅವುಗಳಲ್ಲಿಯೇ ಮೇಲು -ಕೀಳೆಂದು ಭಾವಿಸುವಿಕೆ ಮತ್ತು ಉದ್ಯೋಗಿಗಳ ವಿಭಜನೆ ಕೂಡ ನಡೆಯಿತು. ಉದ್ಯೋಗಿಗಳ ವರ್ಗೀಕರಣದ ಜೊತೆಗೆ ಹುಟ್ಟಿನಿಂದಲೇ ಜನರನ್ನು ಮೇಲು -ಕೀಳೆಂದು ವಿಂಗಡಿಸುವ ಅನಿಷ್ಟ ಪದ್ಧತಿ ಬೆಳೆಯಿತು.

ಈ ಅನಿಷ್ಠ ಪದ್ಧತಿಯನ್ನು ಖಂಡಿಸಿ ಗುರು ಬಸವಣ್ಣನವರು ಎಲ್ಲರೂ ಹುಟ್ಟುವುದು ಒಂದೇ ರೀತಿ; ಯಾರೇನು ಆಕಾಶದಿಂದ ಇಳಿದಿಲ್ಲ. ಹುಟ್ಟಿನಿಂದ ಎಲ್ಲರೂ ಸಮಾನರು. ಸಂಸ್ಕಾರ, ಗುಣ ನೀತಿಯಿಂದ ಶ್ರೇಷ್ಠರು ಎಂದು ಈ ವಚನದಲ್ಲಿ ಸಾರಿ ಸಾರಿ ಹೇಳಿದ್ದಾರೆ.

591. ಲೇಸು ಬಯಸುವವನೇ ಶರಣ

ಕೊಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ !
ಕುಲವೇನೋ ಆವಂದಿರ ಕುಲವೇನೊ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಲಿಂಗದೇವನ ಶರಣರೆ ಕುಲಜರು !

-ಬ.ವ.ದೀ. 589

ಈ ವಚನದ ಪ್ರಕಾರ ಪ್ರಾಣಿಗಳನ್ನು ಕೊಲ್ಲುವುದು ಮಾದಿಗನ ವೃತ್ತಿ. ಅಥವಾ ಸತ್ತ ಪ್ರಾಣಿಯ ಮಾಂಸವನ್ನು ತೆಗೆದು ಮಾರುವುದು ಅವನ ವೃತ್ತಿ. ಇನ್ನಿತರ ಅಸ್ಪೃಶ್ಯರು ಮಾಂಸವನ್ನು ಸ್ವೀಕರಿಸುತ್ತಿದ್ದರು. ಯಾವುದೇ ಜಾತಿ, ವೃತ್ತಿಯವರಾದರೂ ಬಸವ ಧರ್ಮವನ್ನು ಇಷ್ಟಲಿಂಗ ದೀಕ್ಷೆಯ ಮೂಲಕ ಸ್ವೀಕರಿಸಿದ ಮೇಲೆ ಅವರು ಅಹಿಂಸಾವ್ರತಧಾರಿಗಳಾಗುತ್ತಿದ್ದರು. ಮಾಂಸಾಹಾರವನ್ನು ತ್ಯಜಿಸುತ್ತಿದ್ದರು. ಆದರೂ ಮಡಿವಂತ ಜಾತಿಗಳವರು ದೀಕ್ಷಿತರ ಪೂರ್ವಾಶ್ರಮವನ್ನು ಎತ್ತಿ ಆಡುತ್ತ ವಿಡಂಬಿಸುತ್ತಿದ್ದರು. ಅಂಥವರಿಗೆ ಗುರು ಬಸವಣ್ಣನವರು ತೀಕ್ಷ್ಣವಾಗಿ ಬುದ್ಧಿ ಹೇಳುತ್ತಾರೆ. ಮಾದಿಗ ಕೊಲ್ಲುವನು, ಹೊಲೆಯ ಹೊಲಸುತಿನ್ನುವನು. ನಿಜ ಆದರೆ ಬೇರೊಂದು ರೀತಿಯಲ್ಲಿ ನಯ ವಂಚಕತನದಿಂದ ಕೊಲ್ಲುವವರು ಕೀಳಲ್ಲವೆ? ಕೇವಲ ನಾಲಿಗೆಯಿಂದ ಮಾಂಸಾಹಾರ ಮಾಡುವವರು ಕೀಳೆನ್ನುವಿರಿ. ಕಣ್ಣಿಂದ ಪರಸ್ತ್ರೀಯನ್ನು ಕದ್ದು ನೋಡುವುದು; ಪರಧನವನ್ನು ಕೈಯಿಂದ ಮುಟ್ಟುವುದು, ನಾಲಿಗೆಯಿಂದ ಅನ್ಯರನ್ನು ನಿಂದಿಸುವುದು ಹೊಲಸು ಕೆಲಸಗಳಲ್ಲವೆ? ಕುಲ ಶ್ರೇಷ್ಠತೆ ಎಂದರೇನು? ಇದು ಜಾತಿಯಿಂದ ಬರದು, ನೀತಿಯಿಂದ ಬರುತ್ತದೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ, ನಮ್ಮ ಲಿಂಗದೇವನಿಗೆ ಶರಣಾದ ಶರಣರೇ ಕುಲಶ್ರೇಷ್ಠರು, ಅವರ ಹುಟ್ಟು ಎಲ್ಲೇ ಇರಲಿ, ಉದ್ಯೋಗ ಯಾವುದೇ ಇರಲಿ!

592. ದೇಹ ಭೋಗ

ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ;
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು!
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು!
'ಪ್ರಾಣಾಯ ಸ್ವಾಹಾ ಅಪಾಯನ ಸ್ವಾಹಾ, ವ್ಯಾನಾಯ ಸ್ವಾಹಾ,

ಉದಾನಾಯ ಸ್ವಾಹಾ, ಸಮನಾಯ ಸ್ವಾಹಾ' ಎಂಬ
ಕರ್ಮಿಗಳನೇನೆಂಬೆ, ಲಿಂಗದೇವಾ! -ಬ.ವ.ದೀ. 590

ಹಾರವರ ಭಕ್ತಿ ಒಣ ಹೆಂಚಿನೊಳಗೆ ಸಸಿಯನ್ನು ಊರಿದಂತೆ; ನೆಲದ ಆಶ್ರಯ ಸಿಕ್ಕದೆ ಇರುವುದರಿಂದ ಕೆಳಗೆ ಬೇರು ಬಿಡದು, ಮೇಲೆ ವಿಸ್ತಾರವಾಗಿ ಹಬ್ಬಿ ಫಲವನ್ನೂ ಕೊಡದು. ಏಕೆಂದರೆ ಸೃಷ್ಟಿಕರ್ತನಾದ ದೇವನಲ್ಲಿ ಅವರಿಗೆ ದೃಢ ನಂಬಿಕೆಯೇ ಇಲ್ಲ. ಈ ಜಗತ್ತು, ಜೀವನ ದೇವರ ಕೊಡುಗೆ. ಅವನಿಗೆ ಅರ್ಪಿಸಿ, ಸ್ವೀಕರಿಸುವುದನ್ನು ಬಿಟ್ಟು ತಟ್ಟೆಯಲ್ಲಿ ಊಟ ಇಟ್ಟುಕೊಂಡು, ಪ್ರಾಣವೇ ಭುಂಜಿಸು, ಅಪಾನವಾಯುವೇ ಭುಂಜಿಸು, ವ್ಯಾನವಾಯುವೇ ಭುಂಜಿಸು, ಉದಾನವಾಯುವೇ ಭುಂಜಿಸು, ಸಮಾನವಾಯುವೇ ತಿನ್ನು, ಎಂದು ಜಡವಾದ ಪಂಚಪ್ರಾಣಗಳಿಗೆ ಸಲ್ಲಿಸುವರು. ಇದು ಕರ್ಮವಲ್ಲದೆ ಮತ್ತೇನು?!

ಗುರು ಬಸವಣ್ಣನವರು ಕೊಟ್ಟ ಧರ್ಮದ ಪ್ರಕಾರ ಪ್ರಸಾದವನ್ನು ದೇವ(ಲಿಂಗಾರ್ಪಿತ)ನಿಗೆ ಅರ್ಪಿಸಿ, ಸ್ವೀಕರಿಸಬೇಕು. ಇಲ್ಲವಾದರೆ ಅದು ಅಂಗಭೋಗವಾಗುತ್ತದೆ.

593. ದುರಾಚಾರ

ನಾನು ಭಕ್ತ, ನಾನು ಪ್ರಸಾದಿ ಎಂದು
ವಿಪ್ರ ಕರ್ಮವ ಮಾಡುವೆ, ಕರ್ಮೀ;
ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೈಯಲು
ವಿಪ್ರನ ಕಾಲ ತೊಳೆವಡೆ
ಲಿಂಗೋದಕ ಹೃದಯದಲ್ಲಿ.
ವಿಪ್ರನ ಕಾಲ ತೊಳೆದ ನೀರು ಮಂಡೆಯ ಮೇಲೆ!
ಇದು ಕಾರಣ ಲಿಂಗದೇವಾ,
ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು. -ಬ.ವ.ದೀ. 591

ಕೆಲವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ಬಳಿಕವೂ ವಿಪ್ರರನ್ನು ಕರೆದು ಅವರ ಕೈಯಿಂದ ಪೂಜೆ ಮಾಡಿಸುವ, ಅವರ ಪಾದಪೂಜೆ ಮಾಡುವ ಪದ್ಧತಿಯನ್ನು ಮುಂದುವರಿಸಿದ್ದಾರೆ. ಇದನ್ನು ಕಂಡು ಗುರು ಬಸವಣ್ಣನವರಿಗೆ ಬಹಳ ಕೋಪ ಬಂದಿದೆ. ಪುರೋಹಿತ ಶಾಹಿಯಿಂದ ಶೋಷಣೆಯಾಗುತ್ತಿದೆ. ಇದನ್ನು ತಪ್ಪಿಸಲೆಂದೇ ಸರಳವಾದ ಹೊಸಧರ್ಮವನ್ನು ಧರ್ಮಪಿತರು ಕೊಟ್ಟುದ್ದು. ಮತ್ತು ಅದೇ ಅಜ್ಞಾನದಿಂದ ಮುಂದುವರಿದರೆ ಹೇಗೆ?

ಜಗದಾದಿ ಕರ್ತೃವಾದ ಪರಮಾತ್ಮನ ಕುರುಹಾದ ಇಷ್ಟಲಿಂಗವನ್ನು ಮುಟ್ಟಿ ಮಜ್ಜನಕ್ಕೆ ಎರೆಯುವ ಕೈಯಿಂದ (ಭವಿಯಾದ) ವಿಪ್ರನ ಕಾಲನ್ನು ತೊಳೆದು ಪಾದಪೂಜೆ ಮಾಡಬಾರದು. ಏಕೆಂದರೆ ಪಾದವನ್ನು ತೊಳೆದ ನಂತರ ಆ ನೀರನ್ನು ತಲೆಯ ಮೇಲೆ ಸಿಂಪಡಿಸಿಕೊಳ್ಳಲಾಗುವುದು. ಲಿಂಗೋದಕ ಹೃದಯದಲ್ಲಿ ಕಾಲು ತೊಳೆದ ನೀರು ತಲೆಯ ಮೇಲೆ. ಎಂಥಾ ವಿಪರ್ಯಾಸ! ಇದು ನಿಜವಾಗಿಯೂ ದುರಾಚಾರ, ಲಿಂಗವಂತನಿಗೆ ನಿಷಿದ್ಧ ಆಚರಣೆ.

ಇಂಥ ವಚನವನ್ನು ಓದಿದಾಗ ಇದು ಮತಾಂಧತೆ ಎನ್ನಿಸುವುದು ಸ್ವಾಭಾವಿಕ. ಆದರೆ

ಇದರ ಹಿಂದಿನ ಉದ್ದೇಶ, ಕಳಕಳಿ ತಿಳಿಯಬೇಕು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಒಬ್ಬರ ಮೇಲೆ ಒಬ್ಬ ಶೋಷಕನಿದ್ದು ಎಲ್ಲ ವರ್ಣದವರೂ ಶೋಷಣೆಗೆ ಒಳಗಾಗಿದ್ದರೂ ಹೆಚ್ಚು ಶೋಷಿತರು ವರ್ಣಾಶ್ರಮ ವ್ಯವಸ್ಥೆಯನ್ನು ಏಣಿಯ ಕಾಲಿನ ಕೆಳಗೆ ಸಿಕ್ಕ ಅಸ್ಪೃಶ್ಯರು ಮತ್ತು ತುಸು ಮೇಲಿದ್ದ ಶೂದ್ರರು. ಇವರನ್ನು ಉಳಿದ ಮೂರು ವರ್ಣೀಯರೂ ಶೋಷಣೆ ಮಾಡುತ್ತಿದ್ದರು. ಎಲ್ಲರೂ ಏನೇನೋ ನಂಬಿಕೆ, ಭಯ ಮುಂತಾದುವನ್ನು ತುಂಬಿ ಶೋಷಿಸುತ್ತಿದ್ದರು. ಈ ದಾಸ್ಯವನ್ನು ತಪ್ಪಿಸಲೆಂದೇ ವೈದಿಕ ವಿಷ ವರ್ತುಲದಿಂದ ಹೊರಬಂದ ಬಸವಣ್ಣನವರು ವೈದಿಕ ಆಚರಣೆಗೆ ವಿರುದ್ಧವಾಗಿ ಸರಳ ಆಚರಣೆ ಕಲಿಸಿದರು. ಇದನ್ನು ಅರಿಯದೆ ಪುನಃ ವೈದಿಕ ಆಚರಣೆಗೆ ಜೋತು ಬೀಳುತ್ತಿದ್ದ ಅನುಯಾಯಿಗಳನ್ನು ಕಂಡಾಗ ಅವರಿಗೆ ಕೋಪ ಬರುತ್ತಿತ್ತು.

ಮಡಿವಾಳ ಮಾಚಿದೇವರು, ಭವಿಗಳ ಬಟ್ಟೆ ತೊಳೆಯುವುದಿಲ್ಲ; ಕೇವಲ ಶರಣರ ಬಟ್ಟೆ ಮಾತ್ರ ತೊಳೆಯುತ್ತೇನೆ ಎಂದು ಪ್ರತಿಜ್ಞೆ ಮಾಡಿರುತ್ತಾರೆ. ಭವಿಗಳು ನೋಡಬಾರದು, ಮುಟ್ಟಬಾರದು ಎಂದು ವೀರಘಂಟೆ ಬಾರಿಸುತ್ತ ಸಾಗುತ್ತಿದ್ದರಂತೆ. ಸ್ವತಃ ಬಿಜ್ಜಳನ ಅರಮನೆಯ ಜನರ ಬಟ್ಟೆ ಸಹ ತೊಳೆಯಲು ಒಪ್ಪದಿದ್ದಾಗ ರಾಜನು ಕೋಪಗೊಳ್ಳುತ್ತಾನೆ. ಇದನ್ನು ನೋಡಿದಾಗ ಶರಣರು ಮತಾಂಧರೆ? ಎಂಬ ಸಂದೇಹ ಬರುತ್ತದೆ. ಸಾಮಾನ್ಯವಾಗಿ ಮೈಲಿಗೆ ಬಟ್ಟೆ ತೊಳೆಯುವ ಮಡಿವಾಳ ಕೀಳು, ಎಲ್ಲರ ಕ್ಷೌರ ಮಾಡುವ ಹಡಪದವ ಕೀಳು ಎಂಬ ಭಾವ ಸವರ್ಣೀಯರಲ್ಲಿತ್ತು, ಬಸವ ಧರ್ಮ ಸ್ವೀಕಾರ ಮಾಡಿದ ಶರಣರಲ್ಲಿ ಆ ಭಾವವಿರಲಿಲ್ಲ. ಆದ್ದರಿಂದ "ನಮ್ಮನ್ನು ಕೀಳಾಗಿ ಕಾಣುವವರ ಬಟ್ಟೆ ತೊಳೆಯುವುದಿಲ್ಲ, ರಾಜ ದರ್ಪದಿಂದ ಅಧಿಕಾರ ಚಲಾಯಿಸಲು ಬಂದರೆ ಕೇಳುವುದಿಲ್ಲ" ಎಂಬ ಆತ್ಮಾಭಿಮಾನವನ್ನು ಶರಣರು ಪ್ರದರ್ಶಿಸಿದರೆ ಅದು ಮತಾಂಧತೆ ಆಗದಷ್ಟೆ.

594. ಅಪಾತ್ರ ದಾಸೋಹ ಸಲ್ಲದು

ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ?
ಕರ್ಪೂರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ?
ಶ್ರೀಗಂಧದ ಮರನ ಕಡಿದು ಬೇವಿಂಗೆ ಅಡೆಯನಿಕ್ಕುವರೆ?
ನಮ್ಮ ಲಿಂಗದೇವನ ಶರಣರಿಗಲ್ಲದೆ
ಬೇರೆ ಇಚ್ಛಾಭೋಜನವನಿಕ್ಕಿದಡೆ
ಕಿಚ್ಚಿನೊಳಗೆ ಉಚ್ಚೆಯ ಹೊಯಿದು ಹವಿಯ ಬೇಳ್ದಂತಾಯಿತ್ತು!

-ಬ.ವ.ದೀ. 592

ಬಂಗಾರದ ನೇಗಿಲಲ್ಲಿ ಭೂಮಿಯನ್ನು ಉತ್ತಿ ನಂತರ ಎಕ್ಕೆಯ ಬೀಜವನ್ನು ಬಿತ್ತುವರೆ? ಬೆಲೆ ಬಾಳುವ ಕರ್ಪೂರದ ಮರವನ್ನು ಕಡಿದು ಬೇವಿನ ತೊಲೆಗೆ ಅಡೆಯಾಗಿ ಇಡುವರೆ? ಅದೇ ರೀತಿ ಲಿಂಗದೇವನ ಶರಣರಿಗಲ್ಲದೆ ಅನ್ಯಾರಿಗೆ ಇಚ್ಛಾಭೋಜನವ ಇಕ್ಕಬಾರದು. ಹಾಗೆ ಕಂಡಕಂಡವರಿಗೆ ಇಚ್ಛಾಭೋಜನ ಮಾಡಿಸಿದರೆ ಅದು ಅಪಚಾರ. ಬೆಂಕಿಯಲ್ಲಿ ಮೂತ್ರ ವಿಸರ್ಜನೆ ಮಾಡಿ ತುಪ್ಪವನ್ನು ಹಾಕಿದಂತಾಗುವುದು.

ವ್ಯಕ್ತಿಯ ಶಕ್ತಿ, ಹಣ, ದಾನ ಎಲ್ಲವೂ ಸಾರ್ಥಕಕ್ಕೆ ಸಲ್ಲಬೇಕೇ ವಿನಾ ಅಪಾತ್ರಕ್ಕಲ್ಲ. ಹಸಿದ ವ್ಯಕ್ತಿಗೆ ಅನ್ನವನ್ನು ಕೊಡುವುದು ಬೇರೆ. ಆಗ ಆಚಾರ -ಅನಾಚಾರ, ವಿಚಾರ ಏನೂ ನೋಡಬೇಕಿಲ್ಲ, ಇಚ್ಛಾಭೋಜನ - ಕರೆದು ಉಣ್ಣಿಸುವುದು, ಇದನ್ನು ಮಾಡಬೇಕಾದರೆ ಬಹಳ ಎಚ್ಚರಿಕೆ ವಹಿಸಬೇಕು.

ಓರ್ವರು ದಾನಿಗಳುಂಟು. ಅವರು ವರ್ಷಕ್ಕೊಮ್ಮೆ ಸಾಧುಗಳಿಗೆ ಊಟಕ್ಕೆ ಹಾಕಿಸಿ, ಬಟ್ಟೆ ಕೊಟ್ಟು ಕೈಯಲ್ಲಿ ಹಣಕೊಟ್ಟು ಕಳಿಸುವರು. ಆ ಸಾಧುಗಳಲ್ಲಿ ಬಹುಪಾಲು ಜನರು ಭಂಗಿ, ಅಫೀಮು ಸೇದುವವರು. ಇಂಥವರನ್ನು ಪೋಷಿಸಿ ಫಲವೇನು?

595. ಶರಣರೇ ಶ್ರೇಷ್ಠ

ಜಾತಿವಿಡಿದು ಸೂತಕವನರಸುವೆ;
ಜ್ಯೋತಿವಿಡಿದು ಕತ್ತಲೆಯನರಸುವೆ!
ಇದೇಕೊ ಮರುಳು ಮಾನವಾ?
ಜಾತಿಯಲ್ಲಿ ಅಧಿಕನೆಂಬೆ :
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನೊ ?
'ಭಕ್ತ ಶಿಖಾಮಣಿ' ಎಂಬುದು ವಚನ.
ನಮ್ಮ ಲಿಂಗದೇವನ ಶರಣರ ಪಾದಪರುಷವ ನಂಬು
ಕೆಡಬೇಡ, ಮಾನವಾ. -ಬ.ವ.ದೀ. 593

ಈ ವಚನವನ್ನು ಇಬ್ಬರನ್ನು ಉದ್ದೇಶಿಸಿ ಹೇಳಿರುವ ಸಂಭವವಿದೆ.

1. ಜಾತಿಯಲ್ಲಿ ಶ್ರೇಷ್ಠ ಎಂದು ಬೀಗಿ ಶರಣರನ್ನು ತಿರಸ್ಕರಿಸುವ ವಿಪ್ರನಿಗೆ
2. ದೀಕ್ಷಾವಂತನಾಗಿಯೂ ಉಳಿದ ದೀಕ್ಷಿತರಲ್ಲಿ ಜಾತಿಗಳನ್ನು ರಸುವ ಮೂಢನಿಗೆ.

ದೀಕ್ಷೆಯನ್ನು ಪಡೆದುಕೊಂಡ ಶರಣರಲ್ಲಿ ಪೂರ್ವದ ಜಾತಿಯನ್ನು ಹುಡುಕಿ ಸೂತಕವನ್ನು ಅರಸುತ್ತೀಯೆ! ಎಂಥಾ ಅಜ್ಞಾನ !! ಯಾರಾದರೂ ಜ್ಯೋತಿಯನ್ನು ಹಿಡಿದು ಕತ್ತಲೆಯನ್ನು ಹುಡುಕುವರೆ? ನೀನು (ವಿಪ್ರನು) ಜಾತಿಯಲ್ಲಿ ಅಧಿಕನು ಎಂದು ಹೊಗಳಿಕೊಳ್ಳುವೆ. ಆದರೆ ನನ್ನ ದೃಷ್ಟಿಯಲ್ಲಿ ಶತಕೋಟಿ ವಿಪ್ರರು ಇದ್ದಲ್ಲಿ ಪ್ರಯೋಜನವೇನು? ಭಕ್ತನೇ ಶಿಖಾಮಣಿ. ಆದ್ದರಿಂದ ನಮ್ಮ ಲಿಂಗದೇವನನ್ನು ನಂಬಿ ಪೂಜಿಸುವ ಶರಣರು ಪೂರ್ವಾಶ್ರಯದಲ್ಲಿ ಯಾವುದೇ ಜಾತಿಯಾದರೇನು ಅವರ ಪಾದವು ಪರುಷದಂತೆ, ಪರಿವರ್ತಿಸುವ ಗುಣ ಉಳ್ಳದ್ದು! ಇದನ್ನು ನಂಬು, ನಂಬದೆ ಕೆಡಬೇಡ.

596. ನಂಬದವನೆ ಕೀಳು

ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡೆನೆ?
ನೆಲನನುಗ್ಗಡಿಸಿ ಉಘೇ, ಚಾಂಗು ಭಲಾ ಎಂದು!
ಕುಲಕಧಿಕ ಹಾರುವಂಗೆ ಸಿದ್ಧಿಗೆಯ್ಸಲೆ

****

ನಿಮ್ಮ ಶರಣರ ಮಹಿಮ ಘನಕ್ಕೆ ಘನ!

ಎಲೆ ಲಿಂಗದೇವಾ, ನಿಮ್ಮ ನಂಬದವನೆ ಹೊಲೆಯ. -ಬ.ವ.ದೀ. 594

ಸಮಾಜದಲ್ಲಿ ಅತ್ಯಂತ ಶೋಷಿತರಾಗಿ, ದಯನೀಯ ಸ್ಥಿತಿಯಲ್ಲಿ ಬದುಕುವ ಹೊಲೆಯ ಮಾದಿಗ ಜಾಗೃತ ಜೀವಿಗಳಾಗಿ ಭಕ್ತರಾದರೆ ಅವರಷ್ಟೇ ಅಲ್ಲ ಅವರ ಮನೆಯ ನಾಯಿ ಸಹ ಗೌರವಾರ್ಹವಾಗುತ್ತದೆ. ಅವರ ಮನೆಯ ನಾಯಿಗೆ ಪಂಚಮಹಾವಾದ್ಯಗಳಾದ ಭೇರಿ, ದುಂದುಭಿ ಕಹಳೆ, ಶಂಖ, ತೂರ್ಯಗಳೊಡನೆ ಸನ್ಮಾನವನ್ನು ಮಾಡದೆ ಇರುವೆನೆ? ಅಭಿಮಾನದಿಂದ ನೆಲದ ಮೇಲೆ ಕಾಲನ್ನು ಬಡಿದು ಉಘೇ, ಚಾಂಗು, ಭಲಾ ಎಂದು ಉದ್ಘೋಷ ಮಾಡುತ್ತೇನೆ. ಕುಲಕ್ಕಧಿಕ ಹಾರುವನ ಜೊತೆಗೆ ಸ್ಪರ್ಧೆಗಿಡುವೆನು. ನಿಮ್ಮ ಶರಣರ ಮಹಿಮೆ ಅಪಾರ. ಜಾತಿಯಿಂದ ಯಾರು ಹಿರಿದು ಕಿರಿದಲ್ಲ, ಲಿಂಗದೇವಾ, ನಿಮ್ಮ ನಂಬದವನೆ ಕೀಳು.

597. ಕುರಿ – ಕರಿಗಳ ವ್ಯತ್ಯಾಸ

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು-
ತೆರನನರಿಯದೆ ತನಿರಸದ -
ಹೊರಗಣೆಲೆಯನೆ ಮೇದುವು!
ನಿಮ್ಮನರಿವ ಮದಕರಿಯಲ್ಲದೆ
ಕುರಿ ಬಲ್ಲುದೆ, ಲಿಂಗದೇವಾ ? -ಬ.ವ.ದೀ. 595

ಕುರಿಗಳ ಹಿಂಡು ಕಬ್ಬಿನ ತೋಟವನ್ನು ಪ್ರವೇಶಿಸುತ್ತದೆ ಎಂದುಕೊಳ್ಳೋಣ. ಅವು ಕಬ್ಬಿನೊಳಗಣ ತನಿರಸದ ಮರ್ಮವನ್ನರಿಯದೆ ಹೊರಗಣ ಎಲೆಯನ್ನು ಮೆಲ್ಲುತ್ತವೆ. ಆದರೆ ಆನೆ ಕಬ್ಬಿನ ತೋಟದಲ್ಲಿ ಹೊಕ್ಕರೆ ಕಬ್ಬಿನ ಜಲ್ಲೆಯನ್ನು ಹಿಂಡಿ ರಸವನ್ನು ಕುಡಿಯುತ್ತದೆ. ಹಾಗೆ ಪಂಡಿತರು ಮತ್ತು ಅನುಭಾವಿಗಳ ಮಧ್ಯೆ ವ್ಯತ್ಯಾಸವಿದೆ. ಪಂಡಿತರು ಧರ್ಮಶಾಸ್ತ್ರಗಳ ಬಗ್ಗೆ ಶಾಬ್ದಿಕವಾಗಿ ಚರ್ಚಿಸುವರು. ಆದರೆ ಅನುಭಾವಿಗಳು ಧರ್ಮದ ಒಳಹೊಕ್ಕು ದಿವ್ಯಾನಂದವನ್ನು ಪಡೆಯುವರು. ಲಿಂಗದೇವನೆ, ನಿಮ್ಮನರಿಯುವ ಅನುಭಾವಿ ಎಂಬ ಮದಕರಿಯನ್ನು ಸಾಮಾನ್ಯ ಪಂಡಿತರೆಂಬ ಕುರಿಯು ತಿಳಿದುಕೊಳ್ಳಲು ಸಾಧ್ಯವೆ?

598. ಯಾಂತ್ರಿಕ ಜಪ

ಪ್ರಣವವನುಚ್ಚರಿಸುವ ಅಪ್ರಾಮಾಣಿಕರೆಲ್ಲರೂ
ಪ್ರಣವ ಮಂತ್ರಾರ್ಥವನೋದಿ ಮಂತ್ರಾರ್ಥವನರಿಯರು,
ಪ್ರಣವ ಓಂ ನಮಃ ಶಿವಾಯ, ಪ್ರಣವ ಓಂ ನಮಃ ಶಿವಾಯ,
ಪ್ರಣವ ಓಂ ನಮಃ ಶಿವಾಯ ಎಂದುವು ಶ್ರುತಿಗಳೆಲ್ಲಾ;
ಪ್ರಣವ ಓಂ ಭರ್ಗೋ ದೇವ ಎಂದುವು ಶ್ರುತಿಗಳೆಲ್ಲಾ!
ಲಿಂಗದೇವರನರಿಯದ ದ್ವಿಜರೆಲ್ಲಾ ಭ್ರಮಿತರು! -ಬ.ವ.ದೀ. 596

ಅನೇಕರು ಪ್ರಣವವನ್ನು ಯಾಂತ್ರಿಕವಾಗಿ ಉಚ್ಚರಿಸುವರು. ಗಿಳಿಗಳಂತೆ ಮಂತ್ರಗಳನ್ನು ಪಠಿಸುವರು. ಆದರೆ ಮಂತ್ರದೊಳಗಿನ ಅರ್ಥವನ್ನು ಅರಿಯರು. ಎಲ್ಲ ಶ್ರುತಿಗಳು ವೇದಗಳು

****

ಪ್ರಣವ ಓಂ ನಮಃ ಶಿವಾಯ ಎಂದೇ ನುಡಿದವು, ದೇವನು ಪ್ರಣವ ಸ್ವರೂಪಿ ಎಂದವು ಶ್ರುತಿಗಳು. ಈ ಪದಗಳನ್ನು ಯಾಂತ್ರಿಕವಾಗಿ ಉಚ್ಚರಿಸುವ ದ್ವಿಜರು ಅಂತರಾರ್ಥ ಅರಿಯದೆ ದೇವರ ಸ್ವರೂಪವನ್ನು ತಿಳಿಯದೆ ಹೋದರು. ಭ್ರಮಿತರಾಗಿ ನಾನಾ ದೇವತೆಗಳ ಪೂಜೆಯನ್ನು ಮಾಡುವರು.

599. ಮನ ಮುಟ್ಟಿ ನೆನೆಯಬೇಕು.

ವೇದವನೋದಿದಡೇನು? ಶಾಸ್ತ್ರವ ಕೇಳಿದಡೇನಯ್ಯಾ?
ಜಪವ ಮಾಡಿದಡೇನು ? ತಪವ ಮಾಡಿದಡೇನಯ್ಯಾ?
ಏನ ಮಾಡಿದಡೇನು,
ನಮ್ಮ ಲಿಂಗದೇವನ ಮನ ಮುಟ್ಟದನ್ನಕ್ಕ? -ಬ.ವ.ದೀ. 597

ವೇದಗಳನ್ನು ಓದಬಹುದು. ಅವುಗಳನ್ನು ಬಾಯಿಪಾಠ ಮಾಡಬಹುದು. ಶಾಸ್ತ್ರ ಪುರಾಣಗಳನ್ನು ನಿತ್ಯ ಶ್ರವಣ ಮಾಡಬಹುದು. ಏನು ಮಾಡಿದರೇನಂತೆ ಬಹು ಮುಖ್ಯವಾದುದು, ಮನಸ್ಸಿನ ಏಕಾಗ್ರತೆ. ಚಂಚಲತೆಯಿಂದ ಹರಿವ ಮನಸ್ಸು ಲಿಂಗದೇವನಲ್ಲಿ ನಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ

600. ಹಿರಿಯರಾರು?

ನೀವು ಹಿರಿಯರೆಂಬಿರಿ, ಕರ್ಮಿಗಳು, ನೀವು ಕೇಳಿರೆ:
ನಿಮ್ಮ ವೇದಶಾಸ್ತ್ರಗಳು ಆರನು ಹೊಗಳುತ್ತಿದ್ದಾವು?
ಓಂ ದ್ಯಾವಾ ಭೂಮೀ ಜನಯಾನ್ ದೇವ ಏಕೋ ದೇವ
ಎಂದು ಶ್ರುತಿ ಸ್ಮೃತಿಗಳು ಸಾರುತ್ತಲಿದ್ದಾವು.
ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬುದು ಹುಸಿ
'ವರ್ಣಾನಾಂ ಗುರುಃ' ನಮ್ಮ ಲಿಂಗದೇವನ ಶರಣರು. -ಬ.ವ.ದೀ. 598

ನೀವು ಶ್ರೇಷ್ಠ ಎಂದು ಹೇಳಿಕೊಳ್ಳುವಿರಿ ಬರೀ ಕರ್ಮಠ ಆಚರಣೆಗಳಲ್ಲಿ ತೊಡಗಿರುವಿರಿ ಸ್ವಲ್ಪ ವಿಚಾರ ಮಾಡಿರಿ. ನಿಮ್ಮ ವೇದ ಶಾಸ್ತ್ರಗಳು ಯಾರನ್ನು ಹೊಗಳುತ್ತಲಿವೆ? ಓಂಕಾರ ಸ್ವರೂಪಿಯಾದ ದೇವನು ಭೂಮಿ ಮುಂತಾದ ಸಕಲ ಲೋಕಗಳನ್ನು ಸೃಷ್ಟಿಸಿದ್ದಾನೆ ಎಂದು ಶ್ರುತಿ - ಸ್ಮೃತಿಗಳು ಘೋಷಿಸುತ್ತಲಿವೆ. ವರ್ಣಗಳಲ್ಲಿ ಬ್ರಾಹ್ಮಣನು ಶ್ರೇಷ್ಠನು, ಅವನೇ ಗುರು, ಎಂದು ಹೇಳುವಿರಿ. ಇದು ಸುಳ್ಳು! ಲಿಂಗದೇವನನ್ನು ನಂಬಿ ಶರಣಾದ ಶರಣರೇ ಎಲ್ಲ ವರ್ಣಗಳಲ್ಲಿ ಶ್ರೇಷ್ಠರು.

601. ಲಿಂಗದೇವನೊಲಿಮೆಯೇ ಶ್ರೇಷ್ಠ

ನಿಜಭಾವ ಲಕ್ಷ್ಮಿ ಸರಸ್ವತಿ ಒಲಿದಡೆ ಕುಲವನರಸಲದೇಕೆ?
ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವದೇಕೆಯೊ ?
ಕಾಮಧೇನು ಮನೆಯಲಿರಲು ಬೇರೆ ಹಯನನರಸಲದೇಕೆ ?
ಮೋಹವುಳ್ಳ ಠಾವಿನಲ್ಲಿ ಲಜ್ಜೆಯನರಸಲದೇಕೆಯೊ ?
ಮಹಾದಾನಿ ಲಿಂಗದೇವನೊಲಿದು

ಮಾದಾರ ಚನ್ನಯ್ಯನ ಮನೆಯಲುಂಡ!
ವೇದವನೋದಿದವರು ಲಿಂಗವನೊಲಿಸಿ ತೋರಿರೋ! -ಬ.ವ.ದೀ. 599

ಸದ್ಭಾವನೆಯ ಸದುಹೃದಯ, ಸಂಪತ್ತು ಮತ್ತು ವಿದ್ಯೆ ಒಲಿದಡೆ ಅವರಲ್ಲಿ ಕುಲವನ್ನು ಹುಡುಕಬಾರದು. ಉದಾಃ ಒಬ್ಬನಿಗೆ ಪ್ರಯಾಣಕಾಲದಲ್ಲಿ ತುಂಬಾ ಹಸಿವೆಯಾಗಿರುತ್ತದೆ ಎಂದುಕೊಳ್ಳುವ. ಆಗ ಸದುಹೃದಯದ ವ್ಯಕ್ತಿಯೊಬ್ಬ ಊಟವನ್ನು ಕೊಟ್ಟರೆ ಅದು ಸ್ವೀಕಾರಾರ್ಹ ವಲ್ಲವೆ? ಒಬ್ಬನ ಬಳಿ ಸಂಪತ್ತಿರುತ್ತದೆ. ಕಷ್ಟಕಾಲದಲ್ಲಿ ನೆರವೀಯಲು ಮುಂದೆ ಬರುತ್ತಾನೆ. ಆಗ ಅವನ ಜಾತಿ ನೋಡದೆ ಸಹಾಯ ಪಡೆಯಬೇಕು. ಮತ್ತೊಬ್ಬನ ಬಳಿ ವಿದ್ಯೆ ಇರುತ್ತದೆ. ಅವನು ನಿರ್ವಂಚನೆಯಿಂದ ಕಲಿಸಲು ಸಿದ್ಧವಿದ್ದಾಗ ಸಂಕೋಚವಿಲ್ಲದೆ ಪಡೆದುಕೊಳ್ಳಬೇಕು.

"ದೇವನು ಒಲಿದ ಸದ್ಭಕ್ತನಿಗೆ ಯಾವ ಮಂತ್ರ ಬರದಿದ್ದರೂ ಅಷ್ಟೆ.ದೇವರ ಕೃಪೆ ಗಳಿಸಿ ಕೊಳ್ಳಲೆಂದೇ ಎಲ್ಲ ಜಪ, ತಪ, ಸಾಧನೆ. ಅದೇ ದೊರಕಿದ ಮೇಲೆ ಇನ್ನಾವ ಹಂಗೂ ಇಲ್ಲ. ಯಥೇಚ್ಛವಾಗಿ ಹಾಲನ್ನು ಹಿಂಡುವ ಕಾಮಧೇನು ಮನೆಯಲ್ಲಿ ಇರುವಾಗ ಬೇರೆ ಹಸುವನ್ನು ಹುಡುಕಲುಂಟೆ? ಪರಸ್ಪರ ಉತ್ಕಟ ಮೋಹ ಇರುವಲ್ಲಿ ಲಜ್ಜೆಯು ಅಡ್ಡಬರಲು ಸಾಧ್ಯವೆ? ಮಹಾದಾನಿಯಾಗಿದ ಕೂಡಲ ಸಂಗಮದೇವನು ದಲಿತ ಶರಣ ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡನು. ವೇದ ಶಾಸ್ತ್ರ ಪುರಾಣ ಪಾರಂಗತರಾದ ಪಂಡಿತರಾದ ನೀವು ದೇವರನ್ನು ಒಲಿಸಿ ತೋರಿರಿ!" ಎಂದು ಗುರು ಬಸವಣ್ಣನವರು ಪಂಥಾಹ್ವಾನವನ್ನು ನೀಡುತ್ತಾರೆ.

602. ಶರಣರು ನಿಸ್ಸೀಮರು

ಆದ್ಯರಿಗಲ್ಲದೆ ವೇದ್ಯವಾಗದು ಮಾಣಿ ಭೋ ಮಾಣಿ ಭೋ!
ಶಿವಭಕ್ತನೇ ಕುಲಜ.
ಕೈವರ್ತಗರ್ಭಸಂಭೂತಮಾರ್ಕಂಡೇಯ ಮಹಾಮುನೇಃ!
ತಪಸಾ ಜಾಯತೇ ವಿಪ್ರಕುಲಂ ಜಾತಿರ್ನವಿದ್ಯತೇ ॥
ಜಾತನಲ್ಲ ಅಜಾತನಲ್ಲ;
ಲಿಂಗದೇವನ ಶರಣರು ನಿಸ್ಸೀಮರಯ್ಯಾ! -ಬ.ವ.ದೀ. 600

ಆದ್ಯರು ಎಂದರೆ ಬಸವ ಪೂರ್ವದವರು ಎಂದು ಅನೇಕ ಸಾಹಿತಿಗಳು ಬರೆಯುತ್ತಾರೆ. ಹಾಗಲ್ಲ; ಆದ್ಯರು ಎಂದರೆ ಮೊದಲಿಗರು ಎಂದರ್ಥ. ಗುರು ಬಸವಣ್ಣನವರೇ ಆದಿಯಾಗಿ ಅವರ ಸಮಕಾಲೀನರಾದ ಶರಣರು ಆದ್ಯರು. ಇವರು ಸ್ವಯಂ ಇಚ್ಛೆಯಿಂದ ದೀಕ್ಷೆ ಪಡೆಯುವುದರಿಂದ ಇವರಿಗೆ ಶಿವಾಚಾರ, ಶಿವಜ್ಞಾನದ ಅರಿವಿರುತ್ತದೆ.

ನೀವು ಸರಿಯಾಗಿ ತಿಳಿಯಿರಿ. ಶಿವಭಕ್ತನು -ಅವನ ಪೂರ್ವದ ಜಾತಿ ಯಾವುದೇ ಇರಲಿ ಅವನು ಕುಲಜನು. ಶರಣನು ಎಲ್ಲ ಮಾನವರಂತೆ ತಾಯಿ ತಂದೆಯರ ಗರ್ಭದಲ್ಲಿ ಹುಟ್ಟುವ ಕಾರಣ ವನು ಜಾತಿ, ಆದರೆ ಗುರುವಿನ ಹಸ್ತದಲ್ಲಿ ಪುನರ್ಜಾತನಾಗುವ ಕಾರಣ ಅಜಾತ. ಹೀಗೆ ಹುಟ್ಟಿದವನೂ ಅಹುದು ಹುಟ್ಟನ್ನು ಗೆದ್ದವನೂ ಅಹುದು. ಹೀಗಾಗಿ ಶರಣರು ನಿಸ್ಸೀಮರು; ಇವರೊಡನೆ ಹೋಲಿಸಲು ಯಾರೂ ಸಿಗರು.

603. ಅನಾಚಾರ ಬೇಡ

ಎಮ್ಮವರು ಅಧಿಕರು, ಎಲ್ಲರಿಂದಲೂ ಅಧಿಕರು;
ಪಾಕವ ಮಾಡುವ ಭಾಂಡ ಸೊಣಗನ ಡೊವಿಗೆಯಯ್ಯಾ!
ಕೆರಹಿನಲ್ಲಿ ಮುಚ್ಚುವುದು ಆವ ಆಗಮವಯ್ಯಾ?
ಲಿಂಗದೇವಾ, ನಿಮ್ಮ ವಚನವಿಂತೆಂದುದು;
ಕೆರಹಿನಲ್ಲಿ ಮುಚ್ಚುವುದು ಆವ ಆಗಮವಯ್ಯಾ?
ಭವಿ ನೋಡಿದ ಓಗರ ಲಿಂಗಾರ್ಪಿತವಾಗದೆಂದು. -ಬ.ವ.ದೀ. 601

ನಮ್ಮ ಶರಣರು ಶ್ರೇಷ್ಠರು ಇನ್ನುಳಿದ ಎಲ್ಲ ಭಕ್ತರಿಗಿಂತಲೂ ಶ್ರೇಷ್ಠರು. ಕೆಲವು ಶಿವಭಕ್ತರ ಆಚರಣೆಯೇ ವಿಚಿತ್ರ, ಅನಾಚಾರದಿಂದ ಕೂಡಿದೆ. ಉದಾಹರಣೆಗೆ ಶಿವಭಕ್ತನಾದ ಶ್ವಪಚಯ್ಯ ಆತ ಒಮ್ಮೆ ಅಡಿಗೆ ಮಾಡುತ್ತಿದ್ದನು. ಗಡಿಗೆಯಲ್ಲಿ ನಾಯಿಯ ಮಾಂಸ ಬೇಯಿಸುತ್ತಿದ್ದನು. ಅಡಿಗೆಗೆ ಭವಿಯ ದೃಷ್ಟಿ ತಾಕೀತು ಎಂದು ಶ್ವಪಚಯ್ಯನು ಕೆರದಿಂದ ಮುಚ್ಚಿದ, ಈ ಆಚರಣೆಯನ್ನು ಗುರು ಬಸವಣ್ಣನವರು ಪ್ರಸ್ತುತ ವಚನದಲ್ಲಿ ಖಂಡಿಸಿದ್ದಾರೆ.

ಕೆಲವು ಶಿವಭಕ್ತರು ವಿಲಕ್ಷಣವಾಗಿ ಭವಿ- ಭಕ್ತ ಭೇದವನ್ನು ಮಾಡುತ್ತಿದ್ದರು. ನಾಯ ಮಾಂಸ ಬೇಯಿಸುವುದು, ಇತರ ಭವಿಗಳು ನೋಡಬಾರದೆಂದು ಕೆರವಲ್ಲಿ ಮುಚ್ಚುವುದು ಗುರು ಬಸವಣ್ಣನವರಿಗೆ ಅನಾಚಾರವಾಗಿ ತೋರುತ್ತಿದೆ. ಆದ್ದರಿಂದ ಭವಿಯು ನೋಡಿದ ಓಗರ ಲಿಂಗಾರ್ಪಿತವಾಗದೆಂದು ಕೆರಹಿನಲ್ಲಿ ಮುಚ್ಚುವುದು ಯಾವ ಆಗಮದಲ್ಲಿದೆ? ಎಂದು ಟೀಕಿಸುತ್ತಾರೆ

604. ಚಮ್ಮಾವುಗೆ ಪೃಥ್ವಿಗೂ ಸಮನಲ್ಲ

ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು
ಸರಿಯಲ್ಲ, ನೋಡಾ ಲಿಂಗದೇವಾ,
ನಿಮ್ಮ ಶರಣರ ಚಮ್ಮಾವುಗೆಗೆ! -ಬ.ವ.ದೀ. 602

ಗುರು ಬಸವಣ್ಣನವರು ಶರಣರಿಗೆ ಅಪಾರ ಗೌರವ ಕೊಡುತ್ತಿದ್ದರು. ಅವರು ಮೆಟ್ಟುವ ಚಮ್ಮಾವುಗೆ ಅತಿ ಶ್ರೇಷ್ಠ ಎಂದು ಭಾವಿಸುತ್ತಿದ್ದರು. ಇಡೀ ಭೂಮಿಯನ್ನು ಅದಕ್ಕೆ ಬೆಲೆಯಾಗಿ ಕಟ್ಟಲು ಸಾಧ್ಯವಿಲ್ಲ ಎನ್ನುತ್ತಿದ್ದರು. ಕಾಗೆಯು ಕುಳಿತು ಮಲಮೂತ್ರ ವಿಸರ್ಜನೆ ಮಾಡುವ ಹೊನ್ನಿನ ಕಳಸವಾಗುವುದಕ್ಕಿಂತಲೂ ಒಡೆಯರಾದ ಶರಣರು ಮೆಟ್ಟುವ ಚಮ್ಮಾವುಗೆ ಮಾಡಯ್ಯ ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ.

ಈ ವಚನವು ಐತಿಹಾಸಿಕ ಘಟನೆಯನ್ನು ಬಿತ್ತರಿಸುತ್ತದೆ. ಅದೆಂದರೆ ಗುರು ಬಸವಣ್ಣನವರಿಗೆ ಹರಳಯ್ಯನವರು ಶರಣು ಎಂದು ಹೇಳಿದಾಗ, ಪುನಃ ಅವರು ಹರಳಯ್ಯನವರಿಗೆ "ಶರಣು ಶರಣಾರ್ಥಿ" ಎಂದು ಎರಡು ಶರಣುಗಳನ್ನು ಸಲ್ಲಿಸುವರು. ಆಗ ಆಘಾತಕ್ಕೊಳಗಾದ ಹರಳಯ್ಯನವರು ಒಂದು ಶರಣಿನ ಸಾಲ ತೀರಿಸಲು ಮೈ ತೊಡೆಯ ಚರ್ಮದಿಂದ ಚಮ್ಮಾವುಗೆ ಮಾಡಿ ಅರ್ಪಿಸುವರು. ಪವಿತ್ರಾತ್ಮರಾದ ಹರಳಯ್ಯನವರ ಮೈ ಚರ್ಮದಿಂದ ಮಾಡಿದ ಚಮ್ಮಾವುಗೆಗಳನ್ನು ಮೆಟ್ಟುವುದಿಲ್ಲವೆಂದು ಗುರು ಬಸವಣ್ಣನವರು ಅವುಗಳನ್ನು ತಲೆಯ ಮೇಲೆ

ಇಟ್ಟುಕೊಂಡು ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು. ಎಂದು ಉದ್ಗರಿಸುವರು.

605. ದೇವನೊಲಿಮೆಯಿಂದ ದೈವೀಕರಣ

ದೇವಾ, ನಿಮ್ಮ ಪೂಜಿಸಿ ಚನ್ನನ ಕುಲ ಚೆನ್ನಾಯಿತ್ತು;
ದೇವಾ, ನಿಮ್ಮ ಪೂಜಿಸಿ ದಾಸನ ಕುಲ ದೆಸೆವಡೆಯಿತ್ತು;
ದೇವಾ, ನಿಮ್ಮಡಿಗೆರಗಿದ್ದ ಮಡಿವಾಳ ಮಾಚಯ್ಯ ನಿಮ್ಮಡಿಯಾದ
ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ
ಮೇರೆಯುಂಟೆ, ದೇವಾ?
ಜಾತಿ - ವಿಜಾತಿಯಾದಡೇನು ಅಜಾತಂಗೆ ಶರಣೆನ್ನದವನು ?
ಆತನೇ ಹೊಲೆಯ, ಕೂಡಲ ಸಂಗಮದೇವಾ. -ಬ.ವ.ದೀ. 603

ಮಾದಾರ ಚನ್ನಯ್ಯ ಶಿವನನ್ನು ಒಲಿಸಿಕೊಂಡ ಕಾರಣ ಆತನ ಕುಲವೇ ಕೀರ್ತಿಗೆ ಭಾಜನವಾಯಿತು. ಆವರೆಗೂ ಅಸ್ಪೃಶ್ಯರಿಗೆ ಯಾವುದೇ ಸಾಧನೆ ಸಾಧ್ಯವಿಲ್ಲ ಎಂಬ ಭಾವ ತೊಲಗಿ ಎಂಥ ಜಾತಿಯವರೂ ದೇವರ ಕೃಪೆ ಪಡೆಯಬಹುದೆಂದು ಜಗಜ್ಜಾಹೀರಾಯಿತು. ದೇವರ ದಾಸಿಮಯ್ಯನವರು ಶಿವನನ್ನು ಪೂಜಿಸಿ ಸಂಪತ್ತನ್ನು ಪಡೆದುಕೊಂಡ ಕಾರಣ ಅವರ ಕುಲವೆಲ್ಲ ಶ್ರೀಮಂತವಾಯಿತು. ಮಡಿವಾಳಯ್ಯನು ನಿಮ್ಮ ಅಡಿಗೆ ಎರಗಿ ನಿಮ್ಮ ಸ್ವರೂಪವೇ ಆದ.

ಕುಲಶ್ರೇಷ್ಠತೆ ಎಲ್ಲಿದೆ? ದೇವನೊಲಿದುದು ಕುಲತನ, ದೇವನೊಲದಲದುದೇ ಹೊಲೆತನ. ಶಿವಾಗಮಗಳು ಹೇಳುತ್ತವೆ, ಲಿಂಗಾರ್ಚನೆಯನ್ನು ಮಾಡುವ ಶ್ವಪಚ ಶ್ರೇಷ್ಠ, ಲಿಂಗಾರ್ಚನೆ ಮಾಡದ ಬ್ರಾಹ್ಮಣ ಅಧಮ. ಯಾವ ಜಾತಿಯವನಾಡದಡೇನು ದೇವನಿಗೆ ಶರಣೆನ್ನದವನು ಹೊಲೆಯ. ಲಿಂಗದೇವನಿಗೆ ಶರಣಾದವನೇ ಕುಲಜ.

606. ಶರಣ ಜಗಕ್ಕೆ ಪಾವನ

ಚತುರ್ವೇದಿಯಾದಡೇನು? ಲಿಂಗವಿಲ್ಲದವನೆ ಹೊಲೆಯ
ಶ್ವಪಚನಾದಡೇನು? ಲಿಂಗವಿದ್ದವನೆ ಕುಲಜನು
ಆತನ ನುಡಿಗಡಣವೇ ಲೇಸು, ಆತ ಜಗಕ್ಕೆ ಪಾವನ,
ಆತನ ಪ್ರಸಾದವೆನಗಮೃತ ಸೇವನೆ!
ಲಿಂಗದೇವನನರಿದು ಪೂಜಿಸಿದಾತ ಪಡುದರುಶನಕ್ಕಧಿಕ
ಜಗಕ್ಕೆ ಪಾವನ, ನೋಡಾ! -ಬ.ವ.ದೀ. 604

ಚತುರ್ವೇದಗಳಲ್ಲಿ ಪಾರಂಗತನಾದವನಾರೇನು? ಇಷ್ಟಲಿಂಗವನ್ನು ಧರಿಸಿ ಪೂಜಿಸದವನು ಕೀಳು. ಶ್ವಚಚನಾದಡೇನು? ಇಷ್ಟಲಿಂಗವನ್ನು ಧರಿಸಿ ಪೂಜಿಸಿದವನು ಕುಲಜನು. ಆತನ ಮಾತು, ; ಆತನೊಡನೆ ಸಂಭಾಷಣೆ ಅತ್ಯಂತ ಚೇತೋಹಾರಿ. ಅವನು ಪಾವನಾತ್ಮನು. ಅವನ ಮನೆಯಲ್ಲಿ ಪ್ರಸಾದ ಸೇವನೆ ಎನಗೆ ಅಮೃತದ ಆರೋಗಣೆ. ಲಿಂಗದೇವನ ಸ್ವರೂಪವನ್ನು ಅರಿತು ಪೂಜಿಸಿದವನು ಷಡು ದರ್ಶನಕ್ಕೆ ಅಧಿಕ, ಪರಮ ಪಾವನ!

ಅರ್ಥಪೂರ್ಣವಾಗಿ ಆಚರಿಸಲ್ಪಟ್ಟ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿ

ವಿಶ್ವಗುರು ಬಸವಣ್ಣನವರು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿ ಉರಿಯುಂಡ ಕರ್ಪೂರದಂತೆ ಲಿಂಗದೇವನಲ್ಲಿ ಲೀನವಾಗಿ 216 ವರ್ಷಗಳು ಸಂದ ಸನ್ನಿವೇಶದಲ್ಲಿ ಅವರು ಬಯಲಾದ ಶ್ರಾವಣ ಶುದ್ಧ ಪಂಚಮಿಯು ಬಸವ ಪಂಚಮಿ ಎಂದು ಖ್ಯಾತಿವೆತ್ತಿತು. 216ನೆಯ ಬಸವ ಪಂಚಮಿಯು ದಿ.4-8-2011ರ ಪ್ರಭು (ಗುರು)ವಾರದಂದು ಒದಗಿ ಬಂದಿದ್ದು ಬೆಂಗಳೂರು ನಗರದ ಸರ್ ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲೆರೆಯುವ ಮೂಢ ಸಂಪ್ರದಾಯದ ಬದಲು ಆಸ್ಪತ್ರೆಗಳಿಗೆ ಹೋಗಿ ಹಣ್ಣು- ಹಾಲುಗಳನ್ನು ರೋಗಿಗಳಿಗೆ ವಿತರಿಸುವ ಆಚರಣೆಯನ್ನು ಬೆಂಗಳೂರು ರಾಷ್ಟ್ರೀಯ ಬಸವ ದಳದವರು ರೂಢಿಸಿಕೊಂಡು ಬಂದಿದ್ದಾರೆ. ಅದರಂತೆ ಕುಷ್ಠರೋಗಿಗಳ ಆಸ್ಪತ್ರೆಗೆ ಹೋಗಿ ದಿ.4-8-2011, ಬಸವ ಪಂಚಮಿಯಂದು ಬೆಳಿಗ್ಗೆ 8 ಗಂಟೆಗೆ ಹೋಗಿ ಹಣ್ಣು-ಹಾಲು ವಿತರಿಸಿ ಬಂದರು.

ಬೆಳಿಗ್ಗೆ 10-45ಕ್ಕೆ ಬಸವೇಶ್ವರ ಪೂಜಾವ್ರತದೊಡನೆ ಕಾರ್ಯಕ್ರಮವು ಆರಂಭವಾಯಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣವನ್ನು ಮಾಡಿದರು. ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಶರಣ.ಎನ್.ಪುಟ್ಟರುದ್ರ ಸ್ವಾಗತವನ್ನು ಮಾಡಿದರು. 816ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮವನ್ನು ಕರ್ನಾಟಕ ಕಾನೂನು ಮಹಾವಿಶ್ವವಿದ್ಯಾಲಯದ ಕುಲಪತಿಗಳಾದ ಶರಣ.ಡಾ॥ಜೆ.ಎಸ್.ಪಾಟೀಲ್ ದೀಪ ಹಚ್ಚುವ ಮೂಲಕ ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಆಂಧ್ರ ಪ್ರದೇಶದ ಕುಪ್ಪಂ ದ್ರಾವಿಡ ವಿಶ್ವವಿದ್ಯಾಲಯದ ದ್ರಾವಿಡ. ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ॥ ಬಿ. ಬಾಲಗಣಪತಿ ಅವರು ಮತ್ತು ಬಸವ ಸಮಿತಿಯ ಅಧ್ಯಕ್ಷರಾದ ಅರವಿಂದ ಜತ್ತಿಯವರು www.lingayatreligion.com ಎಂಬ ವೆಬ್ ಸೈಟನ್ನು ಉದ್ಘಾಟಿಸಿದರು. ಬೀದರಿನ ನಾಗಶೆಟ್ಟಿ ಮತ್ತು ಸಂಗಡಿಗರು ಸಿದ್ಧಪಡಿಸಿರುವ ಈ ವೆಬ್‌ಸೈಟ್ ಲಿಂಗಾಯತ ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿ ಕೊಡುವ ಸಂಕಲ್ಪ ಹೊಂದಿದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಲಿಂಗಾಯತ ಪಂಚಮಸಾಲೆ ಜಗದ್ಗುರು ಪೀಠದ ಪೂಜ್ಯ ಶ್ರೀ ಜಗದ್ಗುರು ಜಯ ಬಸವ ಮೃತ್ಯುಂಜಯ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀ ಎಲ್ಲೇಗೌಡ ಬೆಸಗರಹಳ್ಳಿ ಉಪನ್ಯಾಸ ಮಾಡಿದರು. ಬೆಂಗಳೂರು ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರಾದ ಉದಯ ಶಂಕರ್ ಹಾಗೂ ಸದಸ್ಯರಾದ ಯಶೋದಮ್ಮ ಕೃಷ್ಣಪ್ಪ, ಗಂಗಾಂಬಿಕಾ ಮಲ್ಲಿಕಾರ್ಜುನ್, ಮಹಿಳಾ ಮೋರ್ಚ ಅಧ್ಯಕ್ಷೆ ಕಲ್ಪನಾ ರುದ್ರೇಶ್ ಅವರನ್ನು ಸತ್ಕರಿಸಲಾಯಿತು. ಬಸವ ಪಂಚಮಿ ಕಾರ್ಯಕ್ರಮದ ಪ್ರಸಾದ ದಾಸೋಹಿಗಳಿಗೆ ಶಾಲು ಹೊದ್ದಿಸಿ ಸತ್ಕರಿಸಲಾಯಿತು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಚಿತ್ರೀಕರಣ ಕಣ್ಮನಗಳನ್ನು ತುಂಬಿತು. ನಿಸರ್ಗ, ಚೈತ್ರ, ಸ್ವಾತಿ-ಶ್ರುತಿ, ಬಸವ ಶ್ರೀ, ವಚನಾ ಮುಂತಾದವರ ನೃತ್ಯರೂಪಕ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ, ಮನದಾ ಮಂದಿರ ಬೆಳಗುವ ಮಾತೆ ಎಂಬ ರೂಪಕ ಎಲ್ಲರನ್ನು ರಂಜಿಸಿದವು. ಸಾಗರ್ ಕಲಾವಿದರ ನೃತ್ಯಗಳು ಮನಸ್ಸಿಗೆ ಮುದ ನೀಡಿದವು.

ದಿ.5-08-11ರಂದು ಬಸವ ಮಂಟಪದಲ್ಲೇ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಯಿತು. ಸಾಮೂಹಿಕ ಲಿಂಗಪೂಜೆಯ ನಂತರ ಉಪನ್ಯಾಸಗಳು ಜರುಗಿದವು. ಶರಣ.ನಾ.ಮಲ್ಲಿಕಾರ್ಜುನ ಮತ್ತು ಇ.ಕೃಷ್ಣಪ್ಪ ಮುಖ್ಯ ಅತಿಥಿಗಳಾಗಿದ್ದರು. ಪ್ರಸಾದ ದಾಸೋಹವನ್ನು ಲಿಂ॥ ತಮ್ಮಣ್ಣನವರ ಸ್ಮರಣಾರ್ಥ ಮಾಡಿಸಿದ ಶರಣೆ. ಶಿವಲೀಲಾಂಬಿಕ ಅವರನ್ನು ಸತ್ಕರಿಸಲಾಯಿತು.

****

ನೆನಪಿನ ಬುತ್ತಿ ಬಿಚ್ಚಿದಾಗ–2

[ಮೇ ಸಂಚಿಕೆಯಿಂದ ಮುಂದುವರೆದಿದೆ] –ಮಾತಾಜಿ

ತಾತನವರ ಮನೆಯಲ್ಲಿ ಇದ್ದುಕೊಂಡು ಪ್ರಾಥಮಿಕ ಶಾಲೆ ಮತ್ತು ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಪೂರೈಸುತ್ತ ಇರುವಾಗ ಬರ ಸಿಡಿಲಿನಂತೆ ಪ್ರಸಂಗವೊಂದು ಎರಗಿತು. ಅದೇ ತಂದೆಯವರ ಸಾವು. ಮಾಧ್ಯಮಿಕ ಶಾಲೆ 7ನೆಯ ತರಗತಿ ಮುಗಿದು ಪ್ರೌಢಶಾಲಾ ಶಿಕ್ಷಣ ಆರಂಭವಾಯಿತು. ಆಗ ನಾನು ಋತುಮತಿಯಾದೆ. ಅಜ್ಜಿಗಳಿಗೆ ಖುಷಿಯೋ ಖುಷಿ. ಅರಸೀಕೆರೆ ತಾಲೂಕು ಜಯಚಾಮರಾಜಪುರ (ಜೆ.ಸಿ.ಪುರ) ದಲ್ಲಿ ಸರ್ಕಾರಿ ವೈದ್ಯರಾಗಿ ತಂದೆಯವರು ಕೆಲಸ ಮಾಡುತ್ತಿದ್ದರು. ಸುಮಾರು ಹತ್ತು ದಿವಸ ಕಾಲ ಕುಳ್ಳಿರಿಸುವ ಸಮಾರಂಭ, ವಿವಿಧ ಬಗೆಯ ಅಲಂಕಾರ, ಊಟೋಪಚಾರ. ಒಂದು ಮದುವೆಗೆ ಮಾಡುವ ಖರ್ಚನ್ನು ತಂದೆಯವರು ಮಾಡಿಬಿಟ್ಟರು [ಅವರು ಅಕಾಲಿಕವಾಗಿ ಮೃತ್ಯು ವಶರಾದಾಗ ಅಜ್ಜಿ ರುದ್ರಮ್ಮ ಗೋಳಾಡುತ್ತ "ಮದುವೆ ಮಾಡಲು ಯೋಗವಿಲ್ಲ ಎಂದು ದೊಡ್ಡವಳಾದಾಗಲೇ ಎಲ್ಲ ವೈಭವ ಮಾಡಿಬಿಟ್ಟರು" ಎನ್ನುತ್ತಿದ್ದರು]

ಈಗಾಗಲೇ ತಿಳಿಸಿರುವಂತೆ ನಾನು ಓದುತ್ತಿದ್ದುದು ತಾತ ಶಂಕರಪ್ಪ, ಅವರ ತಮ್ಮ ಶಿವಣ್ಣ ಅವರ ಪತ್ನಿ ರಾಜಮ್ಮನವರ ಮನೆಯಲ್ಲಿ. ಪ್ರೀತಿ ವಾತ್ಸಲ್ಯ ತೋರಿಸುವ ಸ್ವಭಾವ ಅವರದಲ್ಲವಾದರೂ ರಾಜಮ್ಮನವರನ್ನು ನಾನು ಕೊಂಡಾಡಲೇ ಬೇಕು. ಏಕೆಂದರೆ ಒಂದು ಬಗೆಯ ಬಿಗಿತನದಿಂದ ಕೂಡಿದ ಅವರು ಶಿಸ್ತು ಕಲಿಸಿದರು. ಸೆಂಟ್ರಲ್ ಲೈಬ್ರರಿಯಿಂದ ಪುಸ್ತಕ ತಂದು ತಾವೂ ಓದಿ ನನಗೂ ಓದಲು ಕೊಡುತ್ತಿದ್ದರು. ನಮ್ಮ ತಾತನ ಮನೆ ಎದುರಿಗೆ ಡಿ.ಸಿ ಕಾಂಪೌಂಡ್; ಅಲ್ಲಿ ದಟ್ಟವಾದ ಗಿಡ ಮರಗಳ ಗುಂಪು, ಆಗಾಗ ಕೋಗಿಲೆಯ ಕುಹೂ ಧ್ವನಿ; ವೆರಾಂಡದಲ್ಲಿ ಕುಳಿತು ಗಿಡ ಮರಗಳನ್ನು ದಿಟ್ಟಿಸಿ ನೋಡುತ್ತ ರವೀಂದ್ರನಾಥ ಟ್ಯಾಗೋರ್, ಬಂಕಿಂ ಚಂದ್ರ ಚಟರ್ಜಿ ಇತ್ಯಾದಿ ಮಹಾನ್ ಲೇಖಕರ ಪುಸ್ತಕ ಓದುವ ಅಭ್ಯಾಸ ಬೆಳೆಯಿತು. ನಮ್ಮ ಮನೆಯಲ್ಲೇ ಬೆಳೆದಿದ್ದರೆ ಅಜ್ಜಿ–ತಾಯಿಯ ಪ್ರೀತಿ ವಿಪುಲವಾಗಿ ಸಿಗಬಹುದಿತ್ತೇ ವಿನಾ ಪ್ರೌಢ ಸಾಹಿತ್ಯ ಓದುವ ಅಭಿರುಚಿ ಬೆಳೆಯುತ್ತಿರಲಿಲ್ಲ. ರಾತ್ರಿ ಹತ್ತು ಗಂಟೆಗೆ ಲೈಟನ್ನು ಆರಿಸಬೇಕು. ನನಗೋ ಪುಸ್ತಕದ ಗೀಳು! ಚಿಕ್ಕಜ್ಜಿ (ಚಿಕ್ಕಮ್ಮ ಎಂದು ಕರೆದು ರೂಢಿ) ರಾತ್ರಿ ತಮ್ಮ ರೂಮಿನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡ ಮೇಲೆ ಮೆಲ್ಲನೆದ್ದು ವೆರಾಂಡಾಕ್ಕೆ ಬರುತ್ತಿದ್ದೆ. ವಿಶಾಲವಾದ ಕಿಟಕಿಯ ಮೂಲಕ ಬೀದಿ ದೀಪದ ಬೆಳಕು ತೂರಿ ಬರುತ್ತಿತ್ತು. ಅದರಲ್ಲೇ ತಡರಾತ್ರಿಯವರೆಗೆ ಓದುತ್ತಿದ್ದೆ.

ಕೆಲವೊಂದು ಹವ್ಯಾಸಗಳನ್ನು ಬೆಳೆಸಿಕೊಂಡಿದ್ದೆ. ಅಂಚೆ ಚೀಟಿ ಸಂಗ್ರಹ, ಬೆಂಕಿ ಪೆಟ್ಟಿಗೆಯ ಮೇಲಿನ ಚಿತ್ರ ಸಂಗ್ರಹದ ಜೊತೆಗೆ ದೃಷ್ಟಾಂತ ಕಥೆಗಳು ಮತ್ತು ಉಕ್ತಿಗಳ ಸಂಗ್ರಹ. ಚಂದಮಾಮ, ಬಾಲಮಿತ್ರ ಇವನ್ನು ಮನೆಗೆ ಅಂಚೆಯಲ್ಲಿ ಬರುವಂತೆ ತಾತ ಶಂಕರಪ್ಪ ವ್ಯವಸ್ಥೆ ಮಾಡಿದ್ದರು. ದಿನ ಪತ್ರಿಕೆ, ವಾರ ಪತ್ರಿಕೆಗಳಲ್ಲಿ ಬರುವ ದೃಷ್ಟಾಂತ ಕಥೆಗಳನ್ನು ಕತ್ತರಿಸಿ ಒಂದು ನೋಟ್ ಬುಕ್ಕಿಗೆ ಅಂಟಿಸಿಕೊಳ್ಳುತ್ತಿದ್ದೆ. ಪತ್ರಿಕೆಗಳಲ್ಲಿ ಬರುವ ಉಕ್ತಿಗಳನ್ನು ಸಂಗ್ರಹಿಸಿ ಬರೆದು ಇಟ್ಟುಕೊಳ್ಳುತ್ತಿದ್ದೆ.

ಬಹುಶಃ ಎಂಟನೆಯ ತರಗತಿಯಲ್ಲಿ ಇರುವಾಗ ಬರ ಸಿಡಿಲಿನಂತೆ ಪ್ರಸಂಗವೊಂದು ಎರಗಿತು. ಅದೇ ಡಾ॥ ಬಸಪ್ಪನವರ ಸಾವು. ಡಾ॥ ಬಸಪ್ಪನವರು ಜಯಚಾಮರಾಜಪುರದಲ್ಲಿದ್ದರು. ಅವರ

ಕೈಗುಣದ ಬಗ್ಗೆ ಬಹಳ ಪ್ರಚಾರವಿತ್ತು. ರೋಗಿಗಳು ಎಲ್ಲೆಲ್ಲಿಂದಲೋ ಬಂದು ಚಿಕಿತ್ಸೆ ಪಡೆಯುತ್ತಿದ್ದರು ಅವರ ಬಗ್ಗೆ ಕೇಳಿದ ಚಿಕ್ಕಜೋಗಿಹಳ್ಳಿ ವೆಂಕಟಸ್ವಾಮಿ ಅವರು ತಮ್ಮ ಹಳ್ಳಿಯನ್ನು ಮಾದರಿ ಹಳ್ಳಿಯಾಗಿ ಮಾಡಬೇಕೆಂದು ದೊಡ್ಡ ಆಸ್ಪತ್ರೆ ಕಟ್ಟಿಸಿ, ಜಿಲ್ಲಾ ಸರ್ಜನ್ ಅವರನ್ನು ಒತ್ತಾಯಿಸಿ ತಮ್ಮ ಊರಿಗೆ ಡಾ॥ ಬಸಪ್ಪನವರನ್ನು ವರ್ಗ ಮಾಡಿಸಿಕೊಂಡರು.

ಪೂಜ್ಯ ಅಪ್ಪಾಜಿ (ಡಾ॥ ಎಸ್.ಆರ್. ಬಸಪ್ಪ)ಯವರದು ಮಾತೃ ಹೃದಯ, ಹೆಂಗರುಳು ಇತರರ ಕಷ್ಟ ಕಾರ್ಪಣ್ಯಗಳಿಗೆ ಬಹುವಾಗಿ ಮರುಗುವವರು. ರಾತ್ರಿ ಎಷ್ಟು ಹೊತ್ತಾಗಲಿ ರೋಗಿಗಳು ಬಂದರೆ ತಕ್ಷಣ ಆಸ್ಪತ್ರೆಗೆ ಹೋಗಿ ನೋಡುತ್ತಿದ್ದರಲ್ಲದೆ, ಮನೆಗೆ ಕರೆದರೆ ಹೋಗಿ ಚಿಕಿತ್ಸೆ ಮಾಡುತ್ತಿದ್ದರು ಎಷ್ಟೋ ಸಲ ಆಸ್ಪತ್ರೆಯಿಂದ ತಡವಾಗಿ, ಸುಸ್ತಾಗಿ ಬಂದು ಊಟಕ್ಕೆ ಕುಳಿತಾಗ ಯಾರಾದರೂ ರೋಗಿಗಳು ಬಂದು ಕರೆದರೆ ಅರ್ಧಕ್ಕೇ ಬಿಟ್ಟು ಹೋಗುತ್ತಿದ್ದರು. ಆಗ ಅಜ್ಜಿ ರುದ್ರಮ್ಮ "ಡಾಕ್ಟರ್ ಕೆಲಸ ಯಾವ ಶತ್ರುವಿಗೂ ಬೇಡ" ಎಂದು ಗೊಣಗುತ್ತಿದ್ದರು. "ಉಪವಾಸ, ವನವಾಸ ಎಂಥಾ ಪಾಡಿದು?" ಎನ್ನುತ್ತಿದ್ದರು ಯಾರಿಗೂ ಹಣಕ್ಕಾಗಿ ಹಿಂಸೆ ಕೊಡುತ್ತಿರಲಿಲ್ಲ. ತಾವಾಗಿ ಕೊಟ್ಟರೆ ಸ್ವೀಕರಿಸುತ್ತಿದ್ದರು. ಒಮ್ಮೆ ಪರವೂರಿನ ಶ್ರೀಮಂತ ವೈಶ್ಯರು ಅವರ ತಾಯಿಗೆ ಲಕ್ವ ಆಗಿತ್ತು; ಬಂದು ಅಪ್ಪಾಜಿ ಇದ್ದ ಊರಲ್ಲಿ ಒಂದು ಬಾಡಿಗೆ ಮನೆ ಮಾಡಿಕೊಂಡು ಚಿಕಿತ್ಸೆ ಪಡೆದರು. ಪೂರ್ತಿ ವಾಸಿಯಾದಾಗ ಸ್ವಯಂ ಇಚ್ಛೆಯಿಂದ ಬಂಗಾರದ ಕರಡಿಗೆಯೊಂದನ್ನು ಕೊಡುಗೆಯಾಗಿ ಕೊಟ್ಟರು.

ಅನಾಥರು, ದಿಕ್ಕೇಡಿಗಳು ಒಂದು ಆಸ್ಪತ್ರೆ ಸೇರಿದಾಗ ಮನೆಯಿಂದ ಗಂಜಿ ಮಾಡಿಸಿಕೊಂಡು ಒಯ್ಯುತ್ತಿದ್ದರು. ಆಗ ಅಜ್ಜಿ ರುದ್ರಮ್ಮನವರು ಗೊಣಗುತ್ತಿದ್ದು, "ಮನೆಯಿಂದ ಯಾರಾದರೂ ಒಯ್ಯುವರೆ? ಇದೇನು ಛತ್ರವೆ? ಪಾಪ, ಮೂಕ ಪ್ರಾಣಿಯಂತೆ ದುಡಿಯುವ ಹೆಂಡತಿ ಇದ್ದಾಳೆ ಅಂತ ಹೀಗೆ ಮಾಡ್ತೀಯಾ?" ಸಾಮಾನ್ಯವಾಗಿ ತಂದೆಯವರಿಗೆ ಕೋಪ ಬರುತ್ತಿರಲಿಲ್ಲ. "ಅಮ್ಮಾ, ಒಬ್ಬ ಅಜ್ಜಿ ಕಾಯಿಲೆಯಿಂದ ಮಲಗಿದ್ದಾಳೆ. ಆಕೆಗೆ ಯಾರು ದಿಕ್ಕಿಲ್ಲ. ನಾವು ಇಷ್ಟೂ ಮಾಡಬಾರದೆ? ವಿಚಾರಮಾಡು, ನಿನ್ನನ್ನು ನೋಡಿಕೊಳ್ಳಲು ನಾನಿದ್ದೇನೆ. ಆಕೆಗೆ ಯಾರು ದಿಕ್ಕು?"ಎಂದು ತಾಯಿಗೆ ಹೇಳುತ್ತಿದ್ದರು.

ಸುಪ್ರಭಾತದಲ್ಲಿ ಒಂದು ದಿವಸವೂ ಪೂಜೆ ತಪ್ಪಿಸುತ್ತಿರಲಿಲ್ಲ. ಇಷ್ಟಲಿಂಗ ಪೂಜೆ ಮಾಡುತ್ತಿದ್ದರು. ಯಾವುದಾದರೂ ಗಂಭೀರ ಸ್ವರೂಪದ ಕಾಯಿಲೆಯ ರೋಗಿ ಬಂದರೆ ತೀರ್ಥ–ಪ್ರಸಾದ, ಪುಷ್ಪ ಒಯ್ದು ಅವನ್ನುಕೊಟ್ಟು, ಪ್ರಸಾದ ಪುಷ್ಪ ಮೈ ಮೇಲೆ ಇಟ್ಟು ತಪಾಸಣೆ ಆರಂಭಿಸುತ್ತಿದ್ದರು. ಅಪ್ಪಾಜಿಯ ಮೃದು ಮಾತು, ನಗು ಮುಖವೇ ರೋಗಿಗಳ ಕಾಯಿಲೆಯನ್ನು ಅರ್ಧವಾಸಿ ಮಾಡುತ್ತಿತ್ತು. ಒಮ್ಮೆ ಮನೋರೋಗಿಯೊಬ್ಬರನ್ನು ಕರೆತಂದಾಗ ಬಾಯಿ ತುಂಬ ನೀರನ್ನು ತುಂಬಿಕೊಂಡು ಆತ ವೈದ್ಯರ ಮೇಲೆ ಉಗುಳಿಬಿಟ್ಟ: ಎಲ್ಲ ವಾಸಿಯಾದ ಮೇಲೆ ಯಾರೋ ಈ ಘಟನೆ ಹೇಳಿದಾಗ ಆತ ಸಂಕೋಚದಿಂದ ಕ್ಷಮೆ ಕೇಳಿದ. ಆಗ ಅಪ್ಪಾಜಿ ಹೇಳಿದರು, "ಇರಲಿ, ಹುಚ್ಚರು ಮಕ್ಕಳು ಇಬ್ಬರೂ ಒಂದೇ! ಅದಕ್ಕಾಗಿ ಬೇಸರಪಡಬಾರದು."

ಅಪ್ಪಾಜಿಯವರ ಪ್ರಾಣಿ ಪ್ರೇಮ ಅನನ್ಯ. ಮನೆಯಲ್ಲಿ ಹಸು, ಎಮ್ಮೆಗಳನ್ನು ಸಾಕುತ್ತಿದ್ದರು ಬೆಳಿಗ್ಗೆ ಬೇಗ ಎದ್ದು ಅವುಗಳ ಮೈ ನೀವಿ ಮಾತನಾಡಿಸುತ್ತಿದ್ದರು. ಒಂದು ಊರಿನಲ್ಲಿ ಆಸ್ಪತ್ರೆ ಹತ್ತಿರವೇ ಕೆರೆ ಅಂಗಳ ಇತ್ತು. ದನಕಾಯುವವರು ಕೆರೆ ಅಂಗಳದಲ್ಲಿ ದನಗಳನ್ನು ಮೇಯಿಸುತ್ತಿದ್ದರು. ಅಪ್ಪಾಜಿ ಆಸ್ಪತ್ರೆಯ ವೆರಾಂಡಕ್ಕೆ ಬಂದುನಿಂತಾಗ ನಮ್ಮ ದನಗಳು ಓಡಿ ಬಂದು ಅಂಬಾ ಅಂಬಾ

ಎಂದು ಕರೆಯತೊಡಗಿದವು. ಅಪ್ಪಾಜಿ ಬಂದು ಮೈದಡವಿ ಮುಖ ಸವರುವವರೆಗೂ ಅವು ಕದಲಲಿಲ್ಲ. ಈ ದೃಶ್ಯ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಚಿಕ್ಕ ಜೋಗಿಹಳ್ಳಿಗೆ ಬಂದು ಕೆಲವೇ ತಿಂಗಳಾಗಿವೆ. ತುಂಬಾ ಕಠಿಣ ಶ್ರಮದಿಂದ ದುಡಿಯುತ್ತಿದ್ದ ಪೂಜ್ಯ ಅಪ್ಪಾಜಿಗೆ ಹೃದಯಾಘಾತವಾಯಿತು. ಅಲ್ಲಿದ್ದ ಇನ್ನೊಬ್ಬರು ಮಹಿಳಾ ವೈದ್ಯರು ಹೆಚ್ಚಿನ ಪರಿಣಿತರಲ್ಲ. ಹೀಗಾಗಿ ಮರಣವು ದಾಳಿ ಮಾಡಿತು. ನನಗೆ ಅನ್ನಿಸುತ್ತದೆ ಅವರಿಗೆ ಮಧುಮೇಹ ಇದ್ದುದರಿಂದ ಬಹುಶಃ ಸಕ್ಕರೆ ಅಂಶ ಇಳಿದು ಹೈಪೋಗ್ಲೇಸಿಯ ಆಗಿ ಸಾವು ಸಂಭವಿಸಿರಬಹುದು ಎಂದು. ಈಗಿನಷ್ಟು ಆಗ ವೈದ್ಯ ವಿಜ್ಞಾನ ಮುಂದುವರಿದಿರಲಿಲ್ಲ. ರಕ್ತದಲ್ಲಿ ಸಕ್ಕರೆಯ ಅಂಶ ಜಾಸ್ತಿಯಾದರೂ ನಿಧಾನವಾಗಿ ಏರುವುದರಿಂದ ಅಷ್ಟೊಂದು ಅಪಾಯವಾಗದು; ಸಕ್ಕರೆಯ ಅಂಶ ಕಡಿಮೆಯಾದರೆ ಬಹಳ ಅಪಾಯ. ಮೈಯಲ್ಲ ಬೆವರು ಬಂದು ತಲೆ ಧಿಮಿ ಧಿಮಿ ಎಂದು ಕೋಮಾ ಹಂತಕ್ಕೆ ತಲ್ಪುವನು ಆಗ ತಕ್ಷಣ ಸಕ್ಕರೆ (ಗ್ಲೂಕೋಸ್)ಯನ್ನು ಬಾಯಿಯಲ್ಲಿ ಹಾಕಬೇಕು. ಅಂಥ ಸ್ಥಿತಿಯಲ್ಲಿ ವೈದ್ಯರ ಬಳಿ ಕರೆದೊಯ್ಯಲು ಪರದಾಡಿದರೆ ದಾರಿಯಲ್ಲೇ ಪ್ರಾಣ ಹೋಗುವ ಸಂಭವವಿರುತ್ತದೆ. ಆದ್ದರಿಂದ ಮಧುಮೇಹ ರೋಗಿಗಳು ಸದಾ ಜೊತೆಗೆ ಗ್ಲೂಕೋಸ್, ಸಿಹಿ ಬಿಸ್ಕತ್ ಮುಂತಾಗಿ ಇಟ್ಟುಕೊಂಡಿರಬೇಕು. ಬೆವರು ಬಂದು ಕೊಂಚ ಸುಸ್ತು ಎಂದು ನಿತ್ರಾಣವಾಗುತ್ತಲೇ ಸಿಹಿಯನ್ನು ತಿನ್ನಬೇಕು.

ಈ ಸಂದರ್ಭದಲ್ಲಿ ಒಂದು ಪ್ರಸಂಗವನ್ನು ಉಲ್ಲೇಖಿಸಿದರೆ ಸೂಕ್ತವಾಗುವುದು ನಾವು ಒಮ್ಮೆ ಶ್ರೀಶೈಲದ ಕದಳಿವನ ನೋಡಲು ಹೊರಟಿದ್ದೆವು. ಬಸ್ಸಿನಲ್ಲಿ ಕೊಂಚ ದೂರ ಸಾಗಿ ಅಲ್ಲಿಂದ ನಡೆದು ಬರುವ ಕಾರ್ಯಕ್ರಮ. ಬೆಟ್ಟ ಏರುತ್ತಿರುವಾಗ ಡ್ರೈವರನಿಗೆ ಬವಳಿ ಬಂದಂತಾಗಿ ಬಸ್ಸನ್ನು ಒಂದು ಪಕ್ಕಕ್ಕೆ ನಿಲ್ಲಿಸಿ ಚಕ್ರದ ಮೇಲೆ ಒರಗಿದ. ಪ್ರವಾಸಿಕರಲ್ಲಿ ಒಬ್ಬರ ಬಳಿ ಗ್ಲೂಕೋಸ್ ಪೊಟ್ಟಣವಿತ್ತು, ತಕ್ಷಣ ಅದನ್ನು ತಿನ್ನಿಸಿದರು ಬಸ್ಸನ್ನು ಮುಂದೆ ತೆಗೆದುಕೊಂಡು ಹೋಗಿ ಮುಂದಿನ ಊರಿನಲ್ಲಿ ವೈದ್ಯರಿಗೆ ತೋರಿಸಲಾಯಿತು.

ತಂದೆಯವರ ಅಕಾಲಿಕ ಮರಣ ಅರಗಿಸಿಕೊಳ್ಳಲು ಅಸಾಧ್ಯವಾದ ಅನುಭವವಾಗಿತ್ತು. ಅವರು ಎಲ್ಲೆಲ್ಲಿ ಆಸ್ತಿ ಮಾಡಿದ್ದರು ಹಣ ಇಟ್ಟಿದ್ದರು ಎಂಬ ಬಗ್ಗೆ ಏನೂ ತಿಳಿದಿರಲಿಲ್ಲ, ಬೀರಿನಲ್ಲಿ ಇದ್ದಷ್ಟು ಕಾಗದ ಪತ್ರ ಬಾಂಡ್ ಗಳಿಂದ ಲಭ್ಯವಾದಷ್ಟು ಮಾಹಿತಿಯಿಂದ ಹಣವನ್ನು ಒಟ್ಟು ಮಾಡುವ ಕೆಲಸವನ್ನು ತಾತಂದಿರು ಮಾಡಿದರು. ನಾವು ಸಣ್ಣವರು, ಗಂಗಮ್ಮನವರಿಗೆ ವಿದ್ಯೆ ಇಲ್ಲ ಹೀಗಾಗಿ ಸ್ವಲ್ಪ ಅಸ್ತವ್ಯಸ್ಥತೆಯುಂಟಾಯಿತು ಅತಿಯಾದ ಶ್ರಮದಿಂದ ಬಳಲಿ ಪೂಜ್ಯ ತಂದೆಯವರು ಹೃದಯಾಘಾತದಿಂದ ಲಿಂಗೈಕ್ಯರಾದಾಗ ಅವರ ವಯಸ್ಸು ಕೇವಲ 39. ಪಾರ್ಥಿವ ಶರೀರವನ್ನು ತಂದು ಸಾಸಲಟ್ಟಿಯ ಪಿತ್ರಾರ್ಜಿತ ಆಸ್ತಿಯಾಗಿದ್ದ ತೋಟದಲ್ಲಿ ಸಮಾಧಿ ಮಾಡಲಾಯಿತು.

ತಾತಂದಿರ ಅಭಿಪ್ರಾಯದಂತೆ ತಾಯಿ ಗಂಗಮ್ಮನವರು, ನಾನು, ತಮ್ಮ ಪ್ರಕಾಶ ಎಲ್ಲರೂ ತಾತ ಶಿವಣ್ಣನವರ ಮನೆಯಲ್ಲೇ ಉಳಿದೆವು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪೂರ್ತಿ ಮಾಡಿದೆ. ತಾಯಿ ಗಂಗಮ್ಮನವರು ಮುಗ್ಧ ಸ್ವಭಾವದವರು. ಜೊತೆಗೆ ಸಂಕೋಚ ಪ್ರವೃತ್ತಿ ಬೇರೆ. ಒಂದು ಲೋಟ ನೀರು ಕುಡಿಯಲು ಸಹ ಹೆದರುವ ಸ್ವಭಾವ. ತಾತ ಶಿವಣ್ಣನವರ ಪತ್ನಿ ರಾಜಮ್ಮನವರದು ದರ್ಪಿಷ್ಠ ಸ್ವಭಾವ; ವ್ಯಂಗ್ಯವಾದ, ಕುಟುಕು ಮಾತುಗಳು ಅವರಿಗೆ ಮಕ್ಕಳಿರಲಿಲ್ಲ. ನಮ್ಮ ತಾಯಿಯವರ ಮದುವೆಯಾಗಿ ಒಂದು ವರ್ಷ

ತುಂಬುವುದರಲ್ಲೇ ನಾನು ಹುಟ್ಟಿದೆ. ಆಗ ಕೊಂಕು ಮಾತುಗಳನ್ನು ಆಡುತ್ತಿದ್ದರಂತೆ. ಏನು ಸೋಜಿಗ? ಮದುವೆಯಾಗಿ ಆಗಲೇ 3–4 ತಿಂಗಳಿಗೆಲ್ಲ ಗರ್ಭಿಣಿ ಎಂಬ ಸುದ್ದಿ! ಎಂದು ವ್ಯಂಗ್ಯವಾಡುತ್ತಿದ್ದರಂತೆ. ನಾನು ಹುಟ್ಟಿದಾಗ ದಿನ ತುಂಬುವ ಮೊದಲೇ ಹುಟ್ಟಿದ್ದರಿಂದ ಬಹಳ ವೀಕ್ ಆಗಿದ್ದೆ. ಬಣ್ಣ ನಸುಗೆಂಪು. ಆಗ ಅನ್ನುತ್ತಿದ್ದರಂತೆ; "ಇಲಿ ಮರಿ ಇದ್ದಂತೆ ಇದೆ ಕರ್‍ಗೆ; ಇಂಥಾ ಮಕ್ಕಳನ್ನು ಏಕೆ ಪಡೆಯಬೇಕು?" ಪಾಪ, ಅವರಿಗೆ ಕರೀದು ಆಗಲಿಲ್ಲ ಬಿಳೀದೂ ಆಗಲಿಲ್ಲ!!

ತಾಯಿ ಗಂಗಮ್ಮನವರು ಪರತಂತ್ರದ ಬದುಕು ತಮ್ಮದಾಯಿತು; ಇದೇ ರೀತಿ ಎಷ್ಟು ವರ್ಷ ಕಳೆಯಬೇಕು ಎಂದು ಮನಸ್ಸಿನಲ್ಲಿ ಕೊರಗುತ್ತಿದ್ದರು. ಅವರ ಕಡೆಯ ಸಂಬಂಧಿಗಳು ಯಾರಾದರೂ ಬಂದರೆ ಊಟಕ್ಕಿಡಲು ಸ್ವಾತಂತ್ರ್ಯವಿಲ್ಲ, ಉಪಚರಿಸಲು ಅವಕಾಶವಿಲ್ಲ; ಮೊದಲೇ ಇವರ ಕೈ ಧಾರಾಳ. ಬಂಧವರನ್ನು ಉಪಚರಿಸದಿದ್ದರೆ ಸಮಾಧಾನವಿರುತ್ತಿರಲಿಲ್ಲ. ಕಡೆಗೆ ನಾನು ನಿರ್ಧಾರ ಮಾಡಿ ತಾತ ಶಂಕರಪ್ಪನವರಲ್ಲಿ ತಿಳಿಸಿದೆ "ನಮಗೆ ಬೇರೆ ಮನೆ ಮಾಡಿಕೊಡಿರಿ. ನಿಮ್ಮನ್ನೂ ನೋಡಿಕೊಳ್ಳಲು ಸಾಧ್ಯವಾಗುವುದು ಅಜ್ಜಿ ರುದ್ರಮ್ಮ ಸಾಸಲಟ್ಟಿಯಲ್ಲಿದ್ದಾರೆ. ಅವರನ್ನೂ ಕರೆಸಿಕೊಳ್ಳಬಹುದು" ಎಂದು ಒತ್ತಾಯ ಮಾಡಿದಾಗ ಬಾಡಿಗೆಗೆ ಕೊಟ್ಟಿದ್ದ ನಮ್ಮ ಒಂದು ಮನೆಯನ್ನು ಬಿಡಿಸಿಕೊಟ್ಟರು. ಸ್ವಾತಂತ್ರ್ಯ ಸಿಕ್ಕ ಹಕ್ಕಿಯಂತೆ ನಾವು ಹರ್ಷಿಸಿದೆವು ಬೇಸಿಗೆ ರಜೆ ಕಳೆದು ನಾನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪಿ.ಯು.ಸಿ.ಗೆ ಸೇರಿದೆ.

ತಾತ ಶಿವಣ್ಣನವರ ಪತ್ನಿ ರಾಜಮ್ಮನವರದು ವಿಲಕ್ಷಣ ವ್ಯಕ್ತಿತ್ವ, ಅವರಿಗೆ ಶ್ರೀಮಂತಿಕೆಯ ಹಮ್ಮು ಬಹಳ. ಮಹಿಳಾ ಸಮಾಜ, ಅಕ್ಕನ ಬಳಗಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ವ್ಯಕ್ತಿ ಉತ್ತಮ ಗ್ರಂಥಗಳನ್ನು ಓದುವ ಹವ್ಯಾಸ ಹೊಂದಿದ್ದರು. ಬಡವರ ಬಗ್ಗೆ ಬಹಳ ತಿರಸ್ಕಾರ ಹೊಂದಿದ್ದರು. ನಾವು ಶಾಲೆಗೆ ಹೋಗುವಾಗ ಬರುವಾಗ ಸುಮಾರು ಬಟ್ಟೆ ಹಾಕಿದ ಹುಡುಗಿಯರ ಜೊತೆ ಇರಬಾರದು; ನೋಡಿದರೆ ರೇಗುತ್ತಿದ್ದರು. ನನಗೋ ಬಡವರನ್ನು ಕಂಡರೆ ಅನುಕಂಪ, ಸಹಾನುಭೂತಿ. ಕೆಲವೊಮ್ಮೆ ಬಡ ಹುಡುಗಿಯರಿಗೆ ಫೀಸು ಕಟ್ಟಲು ಕೊಡುತ್ತಿದ್ದೆ. ಭಿಕ್ಷುಕರು ಬಂದು ಕೂಗಿದರೆ ಮುಂದೆ ಹೋಗು ಎನ್ನುತ್ತಿದ್ದರು. ಆಗ ನಾನು ಅವರಿಗೆ ಸನ್ನೆ ಮಾಡಿ ಚಿಕ್ಕಮ್ಮ ಮರೆಯಾದ ಮೇಲೆ ಅಕ್ಕಿ, ಹಿಟ್ಟು ಇತ್ಯಾದಿ ಒಯ್ದು ಹಾಕುತ್ತಿದ್ದೆ.

ಪಕ್ಕದಲ್ಲಿ ಒಂದು ಮನೆ ಬಾಡಿಗೆ ಕೊಡಲಾಗಿತ್ತು. ಸೀಮಿತ ಆದಾಯದಲ್ಲಿ ಸರಳವಾಗಿ ಬದುಕುತ್ತಿದ್ದರೂ ಒಂದು ಬಗೆಯ ನೆಮ್ಮದಿ ಇತ್ತು ಪಿ.ಯು.ಸಿ ಎರಡು ವರ್ಷ ಮುಗಿಸುವುದರಲ್ಲೆ ಸಾಕಷ್ಟು ಸಾಹಿತ್ಯ ಓದಿದೆ. ಗೆಳತಿಯರು ನನ್ನನ್ನು ಪುಸ್ತಕದ ಹುಳು(Book worm) ಎನ್ನುತ್ತಿದ್ದರು ಎರಡು ಚಿಕ್ಕ ಕಾದಂಬರಿಗಳನ್ನೂ ಬರೆದೆ. ಅವನ್ನು ಇತರರಿಗೆ ತೋರಿಸುವ ಧೈರ್ಯ ಮಾಡಲಿಲ್ಲ ಪಿ.ಯು.ಸಿ ಆದ ಮೇಲೆ ಮೆಡಿಕಲ್ ಓದುವ ಹಂಬಲವಿತ್ತು .ತಂದೆಯವರ ಆಶಯವೂ ನನ್ನನ್ನು ವೈದ್ಯಳನ್ನಾಗಿ ಮಾಡಬೇಕೆಂದಿತ್ತು. ಬೆಂಗಳೂರಿಗೆ ಇಂಟರ್ ವ್ಯೂಗೆ ಕರೆದುಕೊಂಡು ತಾತ ಶಿವಣ್ಣ ಬಂದರು. ಬೆಂಗಳೂರು ಮೆಡಿಕಲ್ ಕಾಲೇಜ್ ಡೀನ್ ಆಗಿದ್ದ ಮಾಣಿಕ್ಯಂ ಅವರು ಸಂದರ್ಶಕರಲ್ಲಿ ಒಬ್ಬರು. ನಮ್ಮ ತಂದೆಯವರ ಪರಿಚಯದವರೂ ಆಗಿದ್ದರು ನನಗೆ ಸುಲಭವಾಗಿ ಮೆಡಿಕಲ್ ಸೀಟು ಸಿಕ್ಕಿತು.

ಆದರೆ ಊರಿಗೆ ಬಂದ ಮೇಲೆ ತಾತ ಶಂಕರಪ್ಪನವರು ಮೆಡಿಕಲ್ ಓದಿಸಲು ನಿರಾಕರಿಸಿದರು "ವೈದ್ಯರ ವೃತ್ತಿ ನಮ್ಮಂತಹ ಕುಲೀನ ಮನೆತನದ ಹೆಣ್ಣು ಮಕ್ಕಳಿಗಲ್ಲ. ಎರಡನೆಯದಾಗಿ ಮೆಡಿಕಲ್

ಓದಿಸುವಷ್ಟು ಹಣ ಎಲ್ಲಿದೆ?" ಎಂದರು "ತಂದೆಯವರಿದ್ದರೆ ಓದಿಸುತ್ತಿದ್ದರು; ಅವರ ಆಸೆ ನನ್ನನ್ನು ವೈದ್ಯಳನ್ನಾಗಿ ಮಾಡಬೇಕೆಂದಿತ್ತು; ಅವರು ದುಡಿದಿಟ್ಟ ಹಣವಿಲ್ಲವೆ?" ಎಂದು ಹೆದರಿ ಕೊಂಡೇ ಕೇಳಿದೆ."ನೋಡು, ನಿನ್ನಾಯುಷ್ಯ ಸ್ವಲ್ಪವಿದೆ ಒಂದು ಗಂಡಾಂತರವಿದೆ; ಅದು ಪಾರಾದರೆ ಮುಂದೆ ದೀರ್ಘಾಯುಷ್ಯ, ಹೀಗಾಗಿ ನಾವು ದುಡ್ಡು ಹಾಕಿ ಓದಿಸಿದೆವು, ನೀನು ಸತ್ತು ಹೋದರೆ ಅದು ವ್ಯರ್ಥವಾಗುವುದಲ್ಲವೇ?" ಇಂಥ ವಿಲಕ್ಷಣವಾದವನ್ನಿಟ್ಟು ನನಗೆ ಮೆಡಿಕಲ್ ಓದಿಸಲಿಲ್ಲ.

ಚಿತ್ರದುರ್ಗದಲ್ಲೇ ಬಿ.ಎಸ್‌ಸಿ ಜೂಆಲಜಿ, ಬಾಟನಿ, ಕೆಮಿಸ್ಟ್ರಿ ವಿಷಯಗಳೊಡನೆ ಓದಲಾರಂಭಿಸಿದೆ. ಈ ಮೂರು ವರ್ಷಗಳ ಅಧ್ಯಯನ ನನ್ನ ಬಾಳನ್ನು ಪಕ್ವಗೊಳಿಸಿತು. ನನ್ನ ವಿಷಯಗಳ ಅಭ್ಯಾಸಕ್ಕಿಂತಲೂ ಸಾಹಿತ್ಯ ಕೃತಿಗಳನ್ನು ಹೆಚ್ಚು ಓದಿದೆ. ವಿಶೇಷ ಮೌಖಿಕ ಅನುಮತಿ ಪಡೆದು ಇಂಗ್ಲೀಷ್ ಮತ್ತು ಕನ್ನಡ ತರಗತಿಗಳಿಗೆ ಹೋಗುತ್ತಿದ್ದೆ. ಕುವೆಂಪುರವರ ಮಹಾರಾತ್ರಿ (ಬುದ್ಧನ ನಿರ್ಗಮನದ ಕಥೆ) ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿತು. ಪ್ರೊ.ನಂಜುಂಡಶಾಸ್ತ್ರಿಯವರ ಇಂಗ್ಲೀಷ್ ಪಾಠಗಳು, ಶೇಕ್ಸ್ ಪಿಯರನ ಮ್ಯಾಕ್ ಬೆತ್ ತುಂಬಾ ಪ್ರಭಾವ ಬೀರಿದವು. ತರಗತಿಯ ಪಾಠ ಮುಗಿಯುತ್ತಿದ್ದಂತೆಯೇ ಲೈಬ್ರರಿಗೆ ಹೋಗಿ ಕುಳಿತುಕೊಳ್ಳುತ್ತಿದ್ದೆ. ಗ್ರಂಥ ಪಾಲಕ-ಹೆಸರು ಮರೆತಿದೆ(ರಾಜಪ್ಪ ಇರಬಹುದು), ಯಾವುದೇ ಹೊಸ ಸಾಹಿತ್ಯ ಕೃತಿ ಬಂದ ತಕ್ಷಣ ಎತ್ತಿಟ್ಟು ಮೊದಲು ನನಗೆ ಕೊಡುತ್ತಿದ್ದರು. ಪಿಯುಸಿ ಮುಗಿಸಿ ಮೊದಲನೆ ಬಿ.ಎಸ್‌ಸಿ ತರಗತಿಗೆ ಸೇರಿದ್ದೆ. ಅದೇ ಆಗ ಹೊಸತು ಉಪನ್ಯಾಸಕರು ಅಯೋರ್ಟಾ ಎಂಬುದರ ಸ್ಪೆಲ್ಲಿಂಗನ್ನು ಕೇಳಿದರು. ಒಂದು ಕಡೆಯಿಂದ ಕೇಳುತ್ತಾ ಬಂದರು. ಯಾರೂ ಸರಿಯಾಗಿ ಹೇಳಲಿಲ್ಲ ಎಲ್ಲರನ್ನೂ ನಿಲ್ಲಿಸಿದರು ನನ್ನ ಪಾಳಿ ಬಂದಾಗ ನಾನು **Aorta** ಎಂದು ಹೇಳಿದೆ. ಉಪನ್ಯಾಸಕರಿಗೆ ತುಂಬಾ ಖುಷಿಯಾಯಿತು. ನನ್ನನ್ನು ಹೊಗಳಿ ಉಳಿದಂತೆ ಎಲ್ಲರನ್ನೂ ಯೂಸ್ ಲೆಸ್ ಎಂದು ಬೈದರು. ಇದರಿಂದ ಉಳಿದ ವಿದ್ಯಾರ್ಥಿಗಳಿಗೆ ಅದರಲ್ಲೂ ಹುಡುಗರಿಗೆ ಈರ್ಷೆಯುಂಟಾಯಿತು. ಅಂದಿನಿಂದ ಆ ಉಪನ್ಯಾಸಕರು ಯಾವುದೇ ಪ್ರಶ್ನೆ ಕೇಳಲಿ ಎಲ್ಲರನ್ನೂ ಕೇಳಿ ಕಡೆಯದಾಗಿ ನನ್ನನ್ನು ಕೇಳುತ್ತಿದ್ದರು. ನನಗೆ ಮುಜುಗರವಾಗುತ್ತಿತ್ತಷ್ಟೆ ಅಲ್ಲ ತುಂಬಾ ಎಚ್ಚರಿಕೆಯಿಂದ ಓದಿಕೊಂಡು ಹೋಗಬೇಕಾಗುತ್ತಿತ್ತು.

ನಾನು ಪಿಯುಸಿಯಲ್ಲಿ ಇರುವಾಗ ನಮ್ಮ ಕಾಲೇಜ್ ಡೇಗೆ ಜನರಲ್ ಕಾರಿಯಪ್ಪನವರು ಬಂದಿದ್ದರು. ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು. ಮೊದಲು ಏನೂ ಹೇಳಿರಲಿಲ್ಲ. ಉಪನ್ಯಾಸ ಮುಗಿದ ಮೆಲೆ ಅವರ ಉಪನ್ಯಾಸದ ಪೂರ್ಣಪಾಠ ಲಿಖಿತರೂಪದಲ್ಲಿ ಒಪ್ಪಿಸಿದವರಿಗೆ ಸ್ಪರ್ಧೆ ಇಡುವುದಾಗಿ ಹೇಳಿದರು. ನಾನೂ ಲೇಖನ ಬರೆದುಕೊಟ್ಟೆ. ಇಂಗ್ಲೀಷ್ ಮೇಜರ್ ಬಿ.ಎ. ಹುಡುಗನಿಗೆ ಪ್ರಥಮ ಬಹುಮಾನ ಪಿ.ಯು.ಸಿ ಸೈನ್ಸ್ ವಿದ್ಯಾರ್ಥಿನಿಯಾದ ನನಗೆ ಎರಡನೆಯ ಬಹುಮಾನ ಬಂದಾಗ ನಮ್ಮ ಪ್ರಿನ್ಸಿಪಾಲ್ ಭರತರಾಜ್ ಸಿಂಗ್ ಬಹಳ ಮೆಚ್ಚಿಕೊಂಡರು. ಲೇಖನದಲ್ಲಿ ನಾನು **Yoke** ಅನ್ನುವ ಪದವನ್ನು **Yolk** ಎಂದು ಬರೆದುದೇ ಎರಡನೆಯ ಸ್ಥಾನಕ್ಕೆ ಇಳಿಸಿತ್ತು. ಇದು ನನಗೆ ಹೆಮ್ಮೆಯ ವಿಷಯವೇಕೆಂದರೆ ನಮ್ಮ ಕಾಲೇಜುಗಳಲ್ಲಿ ಇಂಗ್ಲೀಷ್ ಕಲಿತರೂ ಮಾತನಾಡುವ ಕಲೆ ಅಳವಡದು. ಕನ್ನಡದ ಮೂಲಕ ನಾವು ಇಂಗ್ಲೀಷ್ ಕಲಿಯುವುದೇ ಮುಖ್ಯದೋಷ.

ನಾವು ಪಿಯುಸಿಯಲ್ಲಿದ್ದಾಗ ಚೀನಾ ಭಾರತ ಯುದ್ಧನಡೆಯಿತು. ಯುದ್ಧದ ಬಗ್ಗೆ ಒಂದು ಸಭೆ ನಡೆಯಿತು. ಪ್ರಿ ಭರತರಾಜ್ ಸಿಂಗ್ ಮನ ಮುಟ್ಟುವಂತೆ ಹೇಳಿ ಯಾರ್ಯಾರಿಗೆ ಎಷ್ಟು ಸಾಧ್ಯವೋ ದಾನ ಮಾಡಿ ಎಂದರು. ನನ್ನ ಕೈಯಲ್ಲಿ ಒಂದು ವಜ್ರದ ಉಂಗುರವಿತ್ತು. ತಕ್ಷಣ ಎದ್ದು ಹೋಗಿ ಪ್ರಿನ್ಸಿಪಾಲರ ಮುಂದಿಟ್ಟೆ. ಅವರು ದಂಗಾದರು. ನನ್ನ ಕೊಡುಗೆಯನ್ನು

ಕೊಂಡಾಡಿದರು. ಆಗ ಉಳಿದ ವಿದ್ಯಾರ್ಥಿಗಳು ತಮ್ಮ ಕೈಲಾದಷ್ಟು ಯುದ್ಧನಿಧಿಗೆ ಕೊಟ್ಟರು. (ಪ್ರಿನ್ಸಿಪಾಲ್ ಭರತರಾಜ್ ಸಿಂಗ್ ಪ್ರೊ. ನಂಜುಂಡ ಶಾಸ್ತ್ರಿಗಳಿಗೆ ಹೇಳಿದರಂತೆ, "ಇವರು ಸಾಮಾನ್ಯ ವ್ಯಕ್ತಿಯಲ್ಲ, ಅಸಾಮಾನ್ಯರು, ಏನಾದರೂ ವಿಶೇಷ ಸಾಧನೆ ಮಾಡುತ್ತಾರೆ" ಬೆಂಗಳೂರಲ್ಲಿ ಪ್ರವಚನ ಮಾಡುವಾಗ ಒಮ್ಮೆ ಮಹಾರಾಣಿ ಕಾಲೇಜಿಗೆ ಅತಿಥಿಯಾಗಿ ಆಹ್ವಾನಿಸಿದ್ದರು. ಅಂದಿನ ಕಾರ್ಯಕ್ರಮದ ಅಧ್ಯಕ್ಷತೆ ಪ್ರೊ. ನಂಜುಂಡ ಶಾಸ್ತ್ರಿಗಳದ್ದು. ಅವರು ಭರತರಾಜ್ ಸಿಂಗ್ ಅವರ ಮಾತನ್ನು ನೆನಪಿಸಿಕೊಂಡು ಉಲ್ಲೇಖಿಸಿದರು. ಕಾಲೇಜು ಬಿಟ್ಟ ಮೇಲೆ ಪ್ರೊ. ನಂಜುಂಡ ಶಾಸ್ತ್ರಿಗಳನ್ನು ನೋಡಿದ್ದು ಅದೇ ಮೊದಲು.)

ಕಾಲೇಜು ಮ್ಯಾಗ್‌ಜೀನ್‌ಗಳಿಗೆ ಲೇಖನಗಳನ್ನು ಬರೆಯುತ್ತಿದ್ದೆ. ಚಿತ್ರದುರ್ಗದ ರೋಟರಿ ಸಂಸ್ಥೆಯವರು ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಎರಡು ವಿಷಯಗಳನ್ನು ಕೊಟ್ಟಿದ್ದರು. 1. ನಾನು ಪ್ರಧಾನಿಯಾದರೆ? 2. ನನ್ನ ಭವಿಷ್ಯ ಜೀವನದ ರೂಪುರೇಷೆಗಳು. ನಾನು ಈ ಸ್ಪರ್ಧೆಯಲ್ಲಿ ಭಾಗವಹಿಸಿದೆ. ಎರಡನೆಯ ವಿಷಯ ಆಯ್ದುಕೊಂಡಿದ್ದೆ. ನನಗೆ ಪ್ರಥಮ ಬಹುಮಾನ ಬಂದಿತು. ಚಿತ್ರದುರ್ಗ ನಗರದ ಪುರಭವನದಲ್ಲಿ, ಗೌರ್ನರ್ ಆಗಿದ್ದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಬಹುಮಾನ ವಿತರಣೆ ಮಾಡಿದರು. ನಮ್ಮ ತಾತಂದಿರಿಗೆ ಹಿಗ್ಗೋ ಹಿಗ್ಗು. (ನಂತರ ನಾನು ಮನೆ ಬಿಟ್ಟು ಹೋಗಿ ಸಂಚಾರ ಮಾಡಿ ಪುನಃ ವಾಪಸ್ಸು ಬಂದಾಗ ರೋಟರಿ ಕ್ಲಬ್ ಅಧ್ಯಕ್ಷರಾಗಿದ್ದ ಶ್ರೀ ಪದ್ಮನಾಭನ್ ಅವರು ಒಂದು ಸನ್ಮಾನ ಕಾರ್ಯಕ್ರಮವನ್ನು ಅದೇ ಪುರಭವನದಲ್ಲಿ ಏರ್ಪಡಿಸಿದ್ದರು. ಆಗ ಅವರು"ಪೂಜ್ಯ ಮಾತಾಜಿಯವರಿಗೆ ಒಂದು ವಿಶೇಷ ನೆನಪಿನ ಕಾಣಿಕೆ ಕೊಡುತ್ತೇವೆ ಎಂದು ನಾನು ಸ್ಪರ್ಧೆಯಲ್ಲಿ ಬರೆದಿದ್ದ ಲೇಖನವನ್ನು ಕೊಟ್ಟರು. ಇದನ್ನು ಓದಿದಾಗ, ಈ ವ್ಯಕ್ತಿ ಏನಾದರೂ ವಿಶೇಷ ಸಾಧನೆ ಮಾಡುತ್ತಾರೆ ಎನ್ನಿಸಿ ಆ ಪ್ರಬಂಧವನ್ನು ಜೋಪಾನವಾಗಿ ಕಾಯ್ದಿಟ್ಟಿದ್ದರಂತೆ! (ಮುಂದುವರಿಯುವುದು)

ಬಸವಣ್ಣನ ನೆನೆಯೋಣ

ಶ್ರೀ ಗುರುದೇವ ಬಸವಣ್ಣ
ಈ ನುಡಿ ಮಂತ್ರವೆ ಬಲುಚೆನ್ನ
ಚಿಂತೆಯು ಏತಕೆ ನಿನಗಣ್ಣ
ಮನದಲಿ ಬಸವನ ನೆನೆಯಣ್ಣ

ಭಾಗ್ಯವಾಡಿಯಲಿ ಜನಿಸಿದನಣ್ಣ
ಲೋಕಕೆ ಬೆಳಕಾಗಿ ಬಂದಿಹನಣ್ಣ
ಕರ್ಮಬಂಧನ ಕಳಚಿದನಣ್ಣ
ಸಂಗಮ ಕ್ಷೇತ್ರಕೆ ತೆರಳಿದನಣ್ಣ

ಕಲ್ಯಾಣಪುರದಲ್ಲಿ ನೆಲೆಸಿದನಣ್ಣ
ಅನುಭವ ಮಂಟಪ ಕಟ್ಟಿಹನಣ್ಣ
ಮಂತ್ರಿಯಾಗಿ ತಾ ಶೋಭಿತನಣ್ಣ
ಕ್ರಾಂತಿಪುರುಷನವ ಬಸವಣ್ಣ

ಡಂಭಾಚಾರವ ತೊಡೆದಿಹನಣ್ಣ
ಸಪ್ತಸೂತ್ರವ ನೀಡಿದನಣ್ಣ
ಸ್ಥಾವರ ದೈವವ ಬಿಟ್ಟಿಹನಣ್ಣ
ಇಷ್ಟಲಿಂಗವ ಕೊಟ್ಟಿಹನಣ್ಣ

ಜಾತಿ ಭೇದವ ಅಳಿಸಿದನಣ್ಣ
ಶರಣ ಸಮಾಜ ಕಟ್ಟಿದನಣ್ಣ
ನೀತಿಯ ವಚನವ ರಚಿಸಿದನಣ್ಣ
ಬದುಕಿನ ಮಾರ್ಗವ ತೋರಿದನಣ್ಣ

ಅಷ್ಟಾವರಣವ ಕೊಟ್ಟಿಹನಣ್ಣ
ಪಂಚಾಚಾರವ ತಿಳಿಸಿದನಣ್ಣ
ಷಟಸ್ಥಲ ಮಾರ್ಗವ ತೋರಿದನಣ್ಣ
ಲಿಂಗದೇವನ ಕೂಡಿದನಣ್ಣ

– ಆರ್.ಎಸ್.ಚಾಪಗಾವಿ,
ಬಸವೇಶ್ವರ ಬಡಾವಣೆ, ಬೆಳಗಾವಿ

ಲಿಂಗಾಯತ ಧರ್ಮಮಹಾಸಭಾ ಹಾಗೂ ರಾಷ್ಟ್ರೀಯ ಬಸವ ದಳ ಕಾರ್ಯಕಾರಿಣಿಯ ನಿರ್ಣಾಯಗಳು

ಕಳೆದ ತಿಂಗಳ (ಜುಲೈ) 17 ರಂದು ಧರ್ಮಕ್ಷೇತ್ರ ಕೂಡಲಸಂಗಮದ ಬಸವಧರ್ಮ ಪೀಠದ ಮಹಾಮನೆ ಆವರಣದಲ್ಲಿ ಲಿಂಗಾಯತ ಧರ್ಮಮಹಾಸಭಾ ಹಾಗೂ ರಾಷ್ಟ್ರೀಯ ಬಸವ ದಳ ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿಣಿ ಜರುಗಿತು. ಪ್ರತಿ ಹಳ್ಳಿ ಮತ್ತು ನಗರಗಳಲ್ಲಿ ಲಿಂಗಾಯತ ಧರ್ಮ ಮಹಾಸಭಾ ಮತ್ತು ರಾ.ಬ.ದಳದ ಶಾಖೆಗಳನ್ನು ತೆರೆಯುವುದು, ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ಪಡೆಯುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ವ್ಯಾಪಕವಾಗಿ ಸಮಾಜ ಸಂಘಟನೆ ಮಾಡುವ ಕುರಿತು ಕಾರ್ಯಕಾರಿಣಿಯಲ್ಲಿ ಚರ್ಚಿಸಲಾಯಿತು. ಲಿಂಗಾಯತ ಸಮಾಜದಲ್ಲಿರುವ ಒಳಪಂಗಡಗಳ ಭೇದವನ್ನು ತೊಡೆದು ಹಾಕಿ ಅಖಂಡ ಲಿಂಗಾಯತ ಸಮಾಜ ನಿರ್ಮಿಸುವುದಕ್ಕಾಗಿ ಎಲ್ಲ ಕಾರ್ಯಕರ್ತರು ಬಸವಧರ್ಮ ಪೀಠದ ಆದೇಶದಂತೆ ನಡೆಯುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕಾರಿಣಿಯಲ್ಲಿ ಎಲ್ಲಾ ರಾ.ಬ.ದಳ ಹಾಗೂ ಲಿಂಗಾಯತ ಧರ್ಮ ಮಹಾಸಭಾದ ಮುಖಂಡರು ಒಮ್ಮತದಿಂದ ಕೈಕೊಂಡ ಪ್ರಮುಖ ನಿರ್ಣಯಗಳು :

1. ಪರಮ ಪೂಜ್ಯ ಮಹಾಜಗದ್ಗುರು ಮಾತಾಜಿಯವರು ನಮ್ಮೆಲ್ಲರ ಮಾರ್ಗದರ್ಶಕರಾಗಿದ್ದು, ಅವರು ಕೇವಲ ಒಂದು ವ್ಯಕ್ತಿಯಲ್ಲ; ದೈವಿ ಶಕ್ತಿಯ ಸಾಕಾರವೇ ಆಗಿದ್ದಾರೆ. ಅವರ ಆರೋಗ್ಯ ಬಹುಮುಖ್ಯವಾದದ್ದು. ಆದ್ದರಿಂದ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸುವುದು. ಯಾವುದೇ ಕೌಟುಂಬಿಕ ಕಾರ್ಯಕ್ರಮಗಳಿಗೆ ಯಾರೂ ಪೂಜ್ಯ ಮಾತಾಜಿಯವರನ್ನು ಆಮಂತ್ರಿಸಿ ಅವರ ಅಮೂಲ್ಯವಾದ ಸಮಯವನ್ನು ಹಾಳು ಮಾಡಬಾರದೆಂದು ನಿರ್ಣಯಿಸಲಾಯಿತು.

2. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮವೆಂದು ಸಾಂವಿಧಾನಿಕ ಮಾನ್ಯತೆ ಪಡೆಯಬೇಕಾದರೆ, ಧರ್ಮವು ಯಾವ ರಾಜ್ಯದಲ್ಲಿ ಹುಟ್ಟಿದೆಯೋ ಆ ರಾಜ್ಯದ ಸರ್ಕಾರ ಆ ಬಗ್ಗೆ ನಿರ್ಣಯ ತೆಗೆದುಕೊಂಡು ಕೇಂದ್ರಕ್ಕೆ ಶಿಫಾರಸ್ಸು ಕಳಿಸಬೇಕಾಗುವುದು. ಆದ್ದರಿಂದ 'ಲಿಂಗಾಯತ ಧರ್ಮ ಸ್ವತಂತ್ರ ಧರ್ಮ' ಎಂದು ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರವನ್ನು ಆಗ್ರಹಪಡಿಸುವುದು.

3. ಪ್ರತಿ ಹಳ್ಳಿ ಹಳ್ಳಿಗಳಿಗೂ ಲಿಂ.ಧ.ಮಹಾಸಭಾ ಶಾಖೆಗಳನ್ನು ತೆರೆಯುವುದು ಆಯಾ ತಾಲ್ಲೂಕು ಮತ್ತು ಜಿಲ್ಲಾ ಮುಖಂಡರ ಜವಾಬ್ದಾರಿ. ಆಯಾ ಶಾಖೆಯ ಪದಾಧಿಕಾರಿಗಳ ಮಾಹಿತಿಯನ್ನು ಕೇಂದ್ರ ಸಮಿತಿಗೆ ಕಳಿಸತಕ್ಕದ್ದು.

4. ಲಿಂಗಾಯತ ಧರ್ಮ ಮಹಾಸಭಾದ ಸದಸ್ಯತ್ವ ಅಭಿಯಾನ ಪ್ರಾರಂಭಿಸಿ ಹೆಚ್ಚು ಹೆಚ್ಚು ಸದಸ್ಯರನ್ನು ಮಾಡಿಕೊಳ್ಳುವುದು ವಾರ್ಷಿಕ ಸದಸ್ಯತ್ವ ಶುಲ್ಕ ತಲಾ 10/- ರೂ. ಅಜೀವ ಸದಸ್ಯತ್ವ ಶುಲ್ಕ ತಲಾ 250/- ರೂ.

5. ಸ್ಥಳೀಯ ಲಿಂ.ಧ.ಮ.ಸಭಾ ಹಾಗೂ ರಾ. ಬ.ದಳದವರು ಸಂಗ್ರಹಿಸಿದ ಕಾಣಿಕೆ ಹಾಗೂ ಸದಸ್ಯತ್ವ ಹಣದಲ್ಲಿ ಕನಿಷ್ಠ 10% ರಷ್ಟು ಕೇಂದ್ರ ಸಮಿತಿಗೆ ಕಳಿಸುವುದು.

6. ಕೇಂದ್ರ ಸಮಿತಿಯ ಪುನರ್ ರಚನೆಯಲ್ಲಿ ಪ್ರತಿ ರಾಜ್ಯದಿಂದ ಐವರು ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೂ ಪ್ರತಿ ಜಿಲ್ಲೆಯ ಐದು ಜನರನ್ನು ಆಯ್ಕೆ ಮಾಡಿ ರಾಜ್ಯ

ಸಮಿತಿ ರಚಿಸುವುದು ಮತ್ತು ಪ್ರತಿ ತಾಲ್ಲೂಕಿನ ಐವರು ಪ್ರತಿನಿಧಿಗಳಿಂದ ಜಿಲ್ಲಾ ಸಮಿತಿ ಹಾಗೂ ಪ್ರತಿಗ್ರಾಮದಿಂದ ತಲಾ ಒಬ್ಬರನ್ನೊಳಗೊಂಡ ತಾಲ್ಲೂಕ ಸಮಿತಿ ರಚನೆ ಮಾಡುವುದು ಎಂದು ನಿರ್ಣಯಿಸಲಾಯಿತು.

7. ಎಲ್ಲಾ ರಾ.ಬ.ದಳ ಮತ್ತು ಲಿಂ.ಧ.ಮಹಾಸಭಾ ಶಾಖೆಯವರು ತಮ್ಮ ವಾರ್ಷಿಕ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸಿ ಪ್ರತಿವರ್ಷ ಸೆಪ್ಟೆಂಬರ್ ತಿಂಗಳೊಳಗೆ ಕೇಂದ್ರ ಸಮಿತಿಗೆ ಕಡ್ಡಾಯವಾಗಿ ಕಳಿಸುವುದು.

8. ಶರಣ ಮೇಳದ ರಜತೋತ್ಸವದ ಅಂಗವಾಗಿ ಸಮಾಜದ ಗಣ್ಯರನ್ನು ಒಳಗೊಂಡ ಸ್ವಾಗತ ಸಮಿತಿಯನ್ನು ಇದೇ ಸೆಪ್ಟೆಂಬರ್ ಒಳಗೇ ರಚಿಸುವುದು.

9. ರಾ.ಬ.ದಳ ಮತ್ತು ಲಿಂ.ಧ.ಮಹಾಸಭಾಗಳ ಕಾರ್ಯಕಾರಿ ಸಮಿತಿಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ಪುನರ್ ರಚಿಸಬೇಕು.

10. ಎಲ್ಲಾ ರಾ.ಬ.ದಳ ಮತ್ತು ಲಿಂ.ಧ.ಮಹಾಸಭಾಗಳು ಪತ್ರಿಕಾ, ದೂರದರ್ಶನ ಹಾಗೂ ಇಂಟರ್‌ನೆಟ್ ಮಾಧ್ಯಮಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

11. ಪತ್ರಿ ವರ್ಷಕ್ಕೊಮ್ಮೆ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ರಾ.ಬ.ದಳ ಮತ್ತು ಲಿಂ.ಧ.ಮಹಾಸಭಾಗಳ ಕಾರ್ಯಕಾರಿಣಿ ಸಭೆ ಜುಲೈನಲ್ಲಿ ಕಡ್ಡಾಯವಾಗಿ ನಡೆಸಬೇಕು.

12. ಶರಣ ಮೇಳದ ರಜತ ಮಹೋತ್ಸವದಲ್ಲಿ ಸೇವೆ ಸಲ್ಲಿಸಲಿಚ್ಛಿಸುವ ಸ್ವಯಂಸೇವಕರನ್ನು ಆಯ್ಕೆ ಮಾಡಿಕೊಂಡು ಒಂದು ಸಾವಿರ ಕಾರ್ಯಕತರಿಗೆ ಮುಂಚಿತವಾಗಿಯೇ ಸೇವಾಕಾರ್ಯಗಳ ಬಗ್ಗೆ ತರಬೇತಿ ನೀಡಬೇಕೆಂದು ನಿರ್ಣಯಿಸಲಾಯಿತು.

13. ಕರ್ನಾಟಕದಲ್ಲಿ 6 ಧಾರ್ಮಿಕ ವಿಭಾಗಗಳನ್ನಾಗಿ ಮಾಡಿ ಎಲ್ಲ ವಿಭಾಗಕ್ಕೂ ಒಬ್ಬೊಬ್ಬ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ಆ ಭಾಗದ ಸಂಘಟನೆ ಸಂಸ್ಕಾರದ ಜವಾಬ್ದಾರಿಯನ್ನು ಅವರಿಗೆ ವಹಿಸುವುದು. ಮುಂಬರುವ ಜನವರಿ 11 ರಿಂದ 15 ರವರೆಗೆ ನಡೆಯಲಿರುವ ಶರಣ ಮೇಳವು "25ನೆಯ ಶರಣ ಮೇಳ"ವಾಗಿರುವ ಕಾರಣ ರಜತ ಮಹೋತ್ಸವವನ್ನು ಅತ್ಯಂತ ಭಕ್ತಿ ವೈಭವದಿಂದ ಆಚರಿಸಲು ನಿರ್ಣಯಿಸಲಾಯಿತು.

ಭಾರತದ ಎಲ್ಲ ರಾಜ್ಯಗಳಿಂದ ಆಗಮಿಸಿದ ಸುಮಾರು ಐದುನೂರು ಪ್ರತಿನಿಧಿಗಳು ಭಾಗವಹಿಸಿದ ಈ ಸಭೆಯಲ್ಲಿ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ ನೇತೃತ್ವ ವಹಿಸಿದ್ದರು, ಪೂಜ್ಯ ಶ್ರೀ ಮಹದೇಶ್ವರ ಸ್ವಾಮೀಜಿ ಹಾಗೂ ಪೂಜ್ಯ ಶ್ರೀ ಬಸವಲಿಂಗ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಸಭಾಧ್ಯಕ್ಷತೆಯನ್ನು ಲಿಂಗಾಯತ ಧರ್ಮಮಹಾಸಭಾದ ಕರ್ನಾಟಕ ರಾಜ್ಯ ಅಧ್ಯಕ್ಷ ಕೆ.ಬಸವರಾಜ ಅವರು ವಹಿಸಿದ್ದರು.

ಶ್ರಾವಣ ಮಾಸದ ಬಸವ ಜ್ಯೋತಿ ಕಾರ್ಯಕ್ರಮಗಳು

– ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು

ಮುಸಲೀಮರಿಗೆ ರಂಜಾನ್ ಪವಿತ್ರ ಮಾಸವಾದಂತೆ ಲಿಂಗಾಯತರಿಗೆ ಶ್ರಾವಣ ಮಾಸವು ಪವಿತ್ರ ಮಾಸ, ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದ ನಿಮಿತ್ತ ಪಾವಿತ್ರ್ಯತೆಯನ್ನು ಪಡೆದುಕೊಂಡ ಈ ತಿಂಗಳು ಇಡೀ ಜ್ಞಾನದ ಉತ್ಸವ. ಮನೆ ಮನೆಗೆ ಬಸವ ಜ್ಯೋತಿಯನ್ನು ಹಮ್ಮಿಕೊಳ್ಳುವರು. ಶರಣ ಬಂಧುಗಳು ತಂಡಗಳನ್ನು ಮಾಡಿಕೊಂಡು ಮನೆಗಳನ್ನು ಸಂದರ್ಶಿಸಿ ಬಸವ ಪೂಜೆ, ಪ್ರಾರ್ಥನೆ, ಪ್ರವಚನ ಮಾಡುವರು. ಕಾರ್ಯಕ್ರಮದ ನಂತರ ಎಲ್ಲರಿಗೂ ಪ್ರಸಾದ ವಿತರಣೆ ಮಾಡುವರು.

****

ಬಸವ ಕಲ್ಯಾಣ : ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ, ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳ ನೇತೃತ್ವದಲ್ಲಿ ದಿ. 30-7-2011 ರಂದು ಪ್ರಾರಂಭವಾದ ಬಸವ ಜ್ಯೋತಿಯು ಅವ್ಯಾಹತವಾಗಿ ನಡೆಯುತ್ತಿದ್ದು ದಿ. 1-9-2011 ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ, ಸ್ವಾಮಿಗಳ ಜಯಂತಿ ಉತ್ಸವ, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ ಮತ್ತು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬದೊಡನೆ ಮಂಗಲಗೊಳ್ಳಲಿದೆ. ಅಂದು ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತಾ ಸಭೆಯು ಜರುಗಲಿದೆ.

ಬೀದರ್ : ರಾಷ್ಟ್ರೀಯ ಬಸವ ದಳದಿಂದ ಪೂಜ್ಯ ಶ್ರೀ ಮಾತೆ ನಿಶ್ಚಲಾಂಬಾ ಅವರ ನೇತೃತ್ವದಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಅವ್ಯಾಹತವಾಗಿ ನಡೆಯುತ್ತಿದೆ.

ಹೈದರಾಬಾದ್ : ಪೂಜ್ಯ ಶ್ರೀ ಸದ್ಗುರು ಪ್ರಭುಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಬಸವ ಜ್ಯೋತಿ ಕಾರ್ಯಕ್ರಮವು ದಿ. 30-07-2011 ರಿಂದ ಆರಂಭವಾಗಿ ದಿ. 31-08-2011ರವರೆಗೆ ಜರುಗಲಿದೆ. ದಿ.31 ರಂದು ಜೆಯಾಗುಡದ ಬಸವ ಮಂಟಪದಲ್ಲಿ ಮಂಗಲ ಸಮಾರಂಭವು ನಡೆಯಲಿದೆ.

ಗುಲಬರ್ಗಾ : ಗುಲಬರ್ಗಾದಲ್ಲಿ ಮಹಾಂತ ನಗರದ ಬಸವ ಮಂಟಪದ ರಾಷ್ಟ್ರೀಯ ಬಸವ ದಳದವರು ಶರಣ. ರೇವಣಪ್ಪ ಹೆಗ್ಗಣೆಯವರ ನೇತೃತ್ವದಲ್ಲಿ, ನೃಪತುಂಗ ಕಾಲನಿ ಬಸವ ದಳದವರು ಶರಣ. ಶಂಕರಪ್ಪ ಮಹಾಂತಗೋಳ ನೇತೃತ್ವದಲ್ಲಿ ಬಹಳ ಚೆನ್ನಾಗಿ ಬಸವ ಜ್ಯೋತಿ ನಡೆಸುತ್ತಿದ್ದಾರೆ.

ಧಾರವಾಡ -ಹುಬ್ಬಳ್ಳಿ : ಧಾರವಾಡ ರಾಷ್ಟ್ರೀಯ ಬಸವ ದಳದವರು ಎರಡು ತಂಡಗಳನ್ನು ಮಾಡಿಕೊಂಡು ನಗರದ ಬೇರೆ ಬೇರೆ ಭಾಗಗಳಲ್ಲಿ ಶರಣರ ಮನೆಗಳಲ್ಲಿ ಬಸವ ಜ್ಯೋತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಜಗನ್ಮಾತಾ ಅಕ್ಕಮಹಾದೇವಿ ಮಠದ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ದಿ. 1-9-2011 ರಂದು ಬೆಳಿಗ್ಗೆ 10-30ಕ್ಕೆ ಸಮಾರೋಪ ಸಮಾರಂಭವಿದೆ. ಇದರ ದಿವ್ಯ ಸನ್ನಿಧಿಯನ್ನು ಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರು ವಹಿಸಿಕೊಳ್ಳಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಅಧ್ಯಕ್ಷರಾದ ಸಿದ್ಧಣ್ಣ ನಟೇಗಲ್ ಕೋರಿದ್ದಾರೆ. ದಿ.31-8-2011ರಂದು ಹುಬ್ಬಳ್ಳಿಯ ಉಣಕಲ್ ನಗರದಲ್ಲಿರುವ ಬಸವ ಮಂಟಪದಲ್ಲಿ ಬೆಳಿಗ್ಗೆ 10-30ರಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ಜ್ಯೋತಿ ಸಮಾರೋಪ ಸಮಾರಂಭವಿದೆ.

ಆಂಧ್ರಪ್ರದೇಶದ ಜಹಿರಾಬಾದ್, ಬೆಳಗಾವಿ, ಗೋಕಾಕ್ ಮುಂತಾದ ಎಲ್ಲೆಡೆ ರಾಷ್ಟ್ರೀಯ ಬಸವ ದಳಗಳಿಂದ ಬಸವ ಜ್ಯೋತಿ ಯಶಸ್ವಿಯಾಗಿ ನಡೆಯುತ್ತಿದೆ.

ಪೂನಾ ನಗರ : ಪುಣ್ಯ ನಗರಿ ಎಂದು ಖ್ಯಾತಿವೆತ್ತ ಪೂನಾ ನಗರದಲ್ಲಿ ಜೂನ್ 4, 5 ಮತ್ತು 6 ರಂದು ಲಿಂಗಾಯತ ಧರ್ಮ ಸಮ್ಮೇಳನವು ಯಶಸ್ವಿಯಾಗಿ ಜರುಗಿತು. ಸಮ್ಮೇಳನಾ ನಂತರ ಕಾರ್ಯಾಲಯವನ್ನು ಹಾಗೆಯೇ ಉಳಿಸಿಕೊಂಡು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಸಂಘಟನಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಶ್ರಾವಣ ಮಾಸದ ನಿಮಿತ್ತ ಭೋಸರಿಯ ಸಂತ ಜ್ಞಾನೇಶ್ವರ ಮಂದಿರದಲ್ಲಿ ಸಂಜೆ 6-30 ರಿಂದ 8-30 ರವರೆಗೆ ಪ್ರವಚನವು ನಡೆಯುತ್ತಲಿದೆ. ಬೆಳಗಿನ ವೇಳೆ ಬಸವ ಜ್ಯೋತಿಯನ್ನು ನೇರವೇರಿಸುತ್ತಿದ್ದಾರೆ. ಪೂಜ್ಯ ಸ್ವಾಮೀಜಿಯವರ ಪ್ರವಚನವು ಪ್ರಭು (ಗುರು)ವಾರ ದಿ. 25-08-2011 ರಂದು ಮಂಗಲಗೊಳ್ಳಲಿದ್ದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯರ ದಿವ್ಯ ಸನ್ನಿಧಿ ವಹಿಸಲಿದ್ದಾರೆ. (ಇನ್ನಿತರ ರಾಷ್ಟ್ರೀಯ ಬಸವ ದಳಗಳವರು ಬಸವ ಜ್ಯೋತಿ ನಡೆಸುತ್ತಿರಬಹುದು. ಆದರೆ ಅವರು ನಮಗೆ ಮಾಹಿತಿ ಕೊಡದ್ದರಿಂದ ತಿಳಿಸಲಾಗಿಲ್ಲ)



ಧಾರವಾಡದಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಉದ್ಘಾಟನೆ







ಅಡಗಿಯಲ್ಲಿ ದಿ.14-8-2011 ರಂದು ನಡೆದ ಪೂಜ್ಯ ಮಾತೆ ಗಂಗಾದೇವಿಯವರ ಪ್ರವಚನ ಮುಕ್ತಾಯ ಸಮಾರಂಭ



ಬಸವ ಪಂಚಮಿ ಉದ್ಘಾಟನೆ ಡಾ॥ ಜೆ.ಎಸ್. ಪಾಟೀಲರಿಂದ



ಹಣ್ಣು ಹಾಲು ವಿತರಣೆ



ಶರಣ ಪಾತ್ರಧಾರಿಗಳು



ಉದ್ಘಾಟನೆಯಲ್ಲಿ ಕೈಜೋಡಿಸಿದ ಶರಣ-ಅರವಿಂದ ಜತ್ತಿ

CPMG/KA/BGW 50/2009-2011,RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17
PAGES 32+4(COVER PAGES)